ten minutes. It may be less but not more than ten minutes. Sri B. J. Linge Gowda was speaking and he will kindly close in five minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈಗಲಾದರೂ ಮಂತ್ರಿಗಳು ಯಾವ ಯಾವ ಮನೆಗಳಲ್ಲಿ ವಾಸವಾಗಿದ್ದಾರೆ, ಮತ್ತು ಅವರ ಮನೆಗಳ ಟೆಲಿಫೋನ್ ನಂಬರುಗಳೇನು ಎಂಬುದನ್ನು ಸರ್ಕಾರದವರು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಆರ್. ಕಂಠಿ.—ನನಗೆ ಗೊತ್ತಿರುವ ಹಾಗೆ ಶ್ರೀ ಮಾನ್ ಮುಕ್ಕಣ್ಣಪ್ಪನವರು ಯಾವಾಗಲೂ ಮಂತ್ರಿಗಳಿಗೆ ಟೆಲಫೋನ್ ಮಾಡುವುದನ್ನು ನಾನು ನೋಡಿಲ್ಲ. ಏನೋ ನಮ್ಮಲ್ಲಿ ಸ್ವಲ್ಪ ಅಸ್ತವ್ಯಸ್ತವಾಗಿದೆಯೆಂದು ಅವರು ಅದನ್ನು ಕೇಳುತ್ತಿದ್ದಾರೆ.

Mr. SPEAKER.—I do not understand this implied conversation between the Leader of the House and Sri Muckannappa. Sri Muckannappa may kindly meet me during the tea break or in my chambers.

MOTION OF THANKS TO THE GOVERNOR'S ADDRESS

(**Debate** *continued*)

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಸ್ವಾಮಿ, ರಾಜ್ಯಪಾಲರು ಮಾಡಿದ ಭಾಷಣದ ಪ್ಯಾರಾ 23ರಲ್ಲಿ 1962–63ರಲ್ಲಿ ಭಾರಿ ಹಾಗೂ ಮಧ್ಯಮ ತರಗತಿಯ ನೀರಾವರಿಯ ಸಂಬಂಧದ ಕಾರ್ಯಕ್ರಮಕ್ಕಾಗಿ ಸುಮಾರು 673 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಲಾಗುವುದು. ಆದರೆ ಈ ಹಣ ಸಾಕಾಗಲಾರದೆಂಬುದರಲ್ಲಿ ಸಂದೇಹವಿಲ್ಲ ಎಂದು ಅವರೇ ಹೇಳಿದ್ದಾರೆ. ಸುಖೀ ರಾಜ್ಯದ ಗುರಿಯನ್ನು ನಾವು ಮುಟ್ಟಬೇಕಾದರೆ ನೀರಾವರಿ ಯೋಜನೆಗಳನ್ನು ಆದಷ್ಟು ಹೆಚ್ಚಿಗೆ ಕಾರ್ಯಗತ ಮಾಡಬೇಕು ಎನ್ನುವುದನ್ನು ನಮ್ಮ ಸರ್ಕಾರದವರು ಮನಗಂಡಿದ್ದಾರೆ. ಆ ಯೋಜನೆ ಫಲಕಾರಿಯಾಗಬೇಕಾದರೆ ಹೆಚ್ಚು ಹಣವನ್ನು ಇಂಡಿಯಾ ಸರ್ಕಾರದಿಂದ ಪಡೆದುಕೊಂಡು ಹೆಚ್ಚಿಗೆ ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಚನ್ನಪಟ್ಟಣದ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯವನ್ನು ಹೇಳುವುದಾದರೆ ಕಣ್ವಾಪ್ರಾಜೆಕ್ಟಿಗೆ ಸಾಕಾದಷ್ಟು ನೀರಿನ ವಸತಿ ಇಲ್ಲದೆ ಅಲ್ಲಿ ತುಂಬಾ ನಷ್ಟವಾಗುತ್ತಿದೆ. ಈ ವಿಷಯ ಸರ್ಕಾರದವರಿಗೂ ಗೊತ್ತಿದೆ. ಇಷ್ಟೇ ಅಲ್ಲದೆ ಇಂಜಿನಿಯರುಗಳು ಮೊದಲು ಮಾಡಿದ ಪ್ಲಾನ ಪ್ರಕಾರ ಮಾಡಿಸಿದ ಕಾಲುವೆಯಿಂದ ಕೂಡ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ನೀರು ಸರಬರಾಜನ್ನು ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ನಮ್ಮ ತಾಲ್ಲೂಕು ಬಹಳ ಜನನಿಬಿಡವಾದ ತಾಲ್ಲೂಕು. ಇಡೀ ಮೈಸೂರು ದೇಶದಲ್ಲಿ ಇದು ಬಹಳ ಹೆಚ್ಚಿನ ಜನಸಂಖ್ಯೆ ಇರುವ ಸ್ಥಳ. ಆದ್ದರಿಂದ ಈ ತಾಲ್ಲೂಕಿನಲ್ಲಿ ತರೀ ವ್ಯವಸಾಯವನ್ನು ಮಾಡಬೇಕಾದರೆ ನೀರಾವರಿ ಸೌಕರ್ಯವನ್ನು ಹೆಚ್ಚಿಗೆ ಒದಗಿಸಿ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯವಾಗಿದೆ. ಅದಕ್ಕೋಸ್ಕರ ಸರ್ಕಾರದವರು ಕಣ್ವಾಪ್ರಾಜೆಕ್ಟಿಗೆ ಸಮರ್ಪಕ ನೀರು ಸರಬರಾಜು ಆಗುವ ಹಾಗೆ ಮೊದಲು ಏರ್ಪಾಡು ಮಾಡಬೇಕು. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರಾಜೆಕ್ಟನ್ನು ಕಟ್ಟಿಸಿ ಅದಕ್ಕೆ ನೀರಿನ ವಸತಿ ಇಲ್ಲದೆ ರೈತರಿಗೆ ತೊಂದರೆಯಾಗುತ್ತಾ ಇರುವುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ರೈತರಿಗೆ ಬಹಳ ನಿರಾಶೆಯಾಗುತ್ತದೆ.

ಈಗ್ಗೆ ಕೆಲವು ವರ್ಷಗಳ ಹಿಂದೆ ಕಣ್ವಾಪ್ರಾಜೆಕ್ಟಿಗೆ ನೀರನ್ನು ಒದಗಿಸುವುದಕ್ಕೆ ಮಾರಿಹಳ್ಳದ ಯೋಜನೆಯನ್ನು ಸರ್ಕಾರದವರು ಯೋಚನೆ ಮಾಡಿದ್ದರು. ಆದರೆ, ಈಚೆಗೆ ಹಳ್ಳಿಮಾಳದ ಯೋಜನೆಯನ್ನು ಪರಿಶೀಲನೆಯಿಂದ ಮಾರಿಹಳ್ಳದ ಯೋಜನೆಯನ್ನು ಕೈಬಿಡುತ್ತಾರೆಂದು ಕೇಳುತ್ತಿದ್ದೇವೆ. ಒಟ್ಟಿನಲ್ಲಿ ಶಿಂಶಾ ಮತ್ತು ಕಾವೇರಿ ಈ ಎರಡು ಯೋಜನೆಗಳನ್ನೂ ಪರಿಶೀಲಿಸಿ ಯಾವುದು ಅನುಕೂಲವೋ ಅದರಿಂದ ಬೇಗನೆ ಬೆಂಗಳೂರಿಗೆ ನೀರನ್ನೊದಗಿಸುವ ಯೋಚನೆ ಮಾಡಿ ಮಾರೀ ಹಳ್ಳದ ಯೋಜನೆಯನ್ನು ಕೂಡಲೇ ಕಾರ್ಯಗತ ಮಾಡಬೇಕಾಗಿ ಒತ್ತಾಯ ಪೂರ್ವಕವಾಗಿ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನರ್ಪಿಸುವ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಒತ್ತಿ ಹೇಳಬೇಕೆಂದು ಇಚ್ಛೆ ಪಡುತ್ತೇನೆ.

ರಾಜ್ಯಪಾಲರು, ನಮ್ಮ ದೇಶದಲ್ಲಿ ರಾಷ್ಟ್ರೀಯ ವಿಸ್ತರಣಾ ಬ್ಲಾಕುಗಳನ್ನು ಕೊಟ್ಟು ದೇಶವನ್ನು ಬಹಳಮಟ್ಟಿಗೆ ಅಭಿವೃದ್ಧಿಪಡಿಸುತ್ತಾ ಅದನ್ನು ಸುಖೀ ರಾಜ್ಯದತ್ತ ಕೊಂಡೊಯ್ಯುತ್ತಿದ್ದೇವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಲೋಪ ದೋಷಗಳಿದ್ದು, ಈ ದೇಶ ಸುಖೀರಾಜ್ಯವಾಗುವುದು ಹೋಗಿ ಎಲ್ಲಿ ದುಃಖೀರಾಜ್ಯವಾಗುತ್ತದೋ ಎನ್ನುವ ಭಯ ಇದೆ. ಆದ್ದರಿಂದ ಇಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಕೆಲವು ಮುಖ್ಯಾಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಈ ಯೋಜನೆಗಳನ್ನು ಜಾರಿಗೆ ಕೊಟ್ಟಿದ್ದಾಗಿದೆಯೇ ಹೊರತು ಅಲ್ಲಿ ಅಧಿಕಾರಿಗಳಿಲ್ಲದೆ ಕೆಲಸಗಳು ಜರಗಿಲ್ಲ. ಉದಾಹರಣೆಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎರಡನೆಯ ಹಂತದ ಬ್ಲಾಕ್ ಕೊಟ್ಟಿರುವಾಗ ಅಲ್ಲಿ ಕೆಲಸಮಾಡಲು ಅಧಿಕಾರಿಗಳೇ ಇಲ್ಲವೆಂದರೆ ಏನು ಹೇಳಲಿ. ಯಾವಾಗ ಒಂದು ಬ್ಲಾಕ್ ಮಂಜೂರಾಯಿತೋ ಆಗ್ಗೆ ಅಲ್ಲಿಗೆ ಬೇಕಾದ ಕಟ್ಟಡದ ಹಣ, ಮುಂತಾದುವುಗಳನ್ನು ಕೊಡದೆ ಹೋದರೆ ಅದು ಹೇಗೆ ನಡೆಯುತ್ತದೆಂಬುದನ್ನು ಯೋಚನೆ ಮಾಡಬೇಕಾಗಿದೆ.

ಆ ಮೇಲೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್‌ಗಳನ್ನು ಪ್ರಸ್ತಾಪಿಸುತ್ತಾ ಅವು ದೇಶದ ಅಭಿವೃದ್ಧಿಯ ಏಜೆಂಟರುಗಳೆಂದು ಹೇಳಿದ್ದಾರೆ. ಆದರೆ ನನ್ನ ಅನುಭವವನ್ನು ಹೇಳುವುದಾದರೆ, ಈ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳನ್ನು ನಾವು ಎಷ್ಟೋ ಚೆನ್ನಾಗಿ ನಡೆಸಬೇಕೆಂಬ ಆಸೆಯುಳ್ಳವರಾಗಿದ್ದರೂ ಕೂಡ, ಕಾರ್ಯ ನಡೆಸುವ ಸಂದರ್ಭದಲ್ಲಿ ಬರತಕ್ಕ ಕುಂದುಕೊರತೆಗಳನ್ನು ನೋಡಿದರೆ ನಮ್ಮ ಉತ್ಸಾಹವೆಲ್ಲಾ ನಿರುತ್ಸಾಹವಾಗುತ್ತದೆ. ಈ ಸೆಮಿನಾರ್‌ಗಳನ್ನು ಮಾಡಿ ಮಂತ್ರಿಗಳನ್ನು ಕರೆಸಿಕೊಂಡು ಈ ತೊಂದರೆಗಳನ್ನೆಲ್ಲಾ ನಿವೇದನೆ ಮಾಡಿಕೊಂಡರೂ,

(ಶ್ರೀ ಜಿ. ರಾಮೇಗೌಡ)

ನಿರ್ಣಯಗಳನ್ನು ಮಾಡಿ ಕಳುಹಿಸಿದರೂ ಯಾವ ಪರಿಣಾಮವೂ ಕಂಡುಬರುತ್ತಿಲ್ಲ. ಹೀಗಾಗಿ ಈ ಯೋಜನೆಗಳಿಂದ ಏನೇನೂ ಪ್ರಯೋಜನವಾಗಲಾರದೆಂದು ನಮಗೆ ಭಯವುಂಟಾಗಿದೆ. 30 ಯೋಜನೆಗಳನ್ನು ಪಂಚಾಯ್ತಿಗಳು ನಡೆಸಲೆಂದು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ವಾಸ್ತವವಾಗಿ ಈ ಯೋಜನೆಗಳು ಪುಸ್ತಕಗಳಲ್ಲಿವೆ. ಸುಮಾರು ಎಂಟು ಯೋಜನೆಗಳನ್ನು ಬಿಟ್ಟು ಮಿಕ್ಕ 22 ಯೋಜನೆಗಳ ವಿಷಯದಲ್ಲಿ ಏನೂ ಸಹಾಯ ಬಂದಿಲ್ಲ. ಸೆಮಿನಾರ್‌ಮಾಡಿ, ತಾಲ್ಲೂಕ್ ಮಟ್ಟದಲ್ಲಾಗಲೀ ಡಿಸ್ಟ್ರಿಕ್ಟ್ ಮಟ್ಟದಲ್ಲಾಗಲೀ ಇವುಗಳನ್ನು ಕಾರ್ಯರೂಪಕ್ಕೆ ತರಲಾಗಿಲ್ಲವೆಂದು ಹೇಳಿದ್ದೇವೆ. ಆದ್ದರಿಂದ ಸರ್ಕಾರದವರು ಅವರು ಮಾಡಿರತಕ್ಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಈ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಮತ್ತು ಸದಸ್ಯರುಗಳಿರುವುದು ಕೇವಲ ಹೆಸರಿಗಾಗಿ. ಅವರಿಗೆ ಒಂದು ಸಲಹೆ ಕೊಡುವ ಅಧಿಕಾರ ಮಾತ್ರ ಇದೆ. ಬ್ಲಾಕ್‌ಡೆವಲಪ್ ಮೆಂಟ್ ಆಫೀಸರ್ ಅವರು ಬರೆದ ಒಂದು ಕಾಗದಕ್ಕೂ ಜವಾಬು ಬರುವುದಿಲ್ಲ. 12 ತಿಂಗಳಲ್ಲ, 14 ತಿಂಗಳಾದರೂ ಕಾಗದಗಳಿಗೆ ಜವಾಬು ಬಾರದಿದ್ದರೆ ಯೋಜನೆಗಳ ಗತಿಯೇನಾದಿತು ? ನಾನು ಒಬ್ಬ, "Wounded Soldier" ತಾಲ್ಲೂಕ್ ಬೋರ್ಡ್ ಅಧ್ಯಕ್ಷ. ಆ ಶಕ್ತಿ ಈ ಶಕ್ತಿ ಮಹಾಶಕ್ತಿ ಎಲ್ಲವನ್ನು ಉಪಯೋಗಿಸಿ ದೇಶವನ್ನು ಉದ್ಧರಮಾಡಬೇಕೆಂದು ಶ್ರೀ ಆಲೂರು ಹನುಮಂತಪ್ಪನವರು ಹೇಳಿದರು. ಎಲ್ಲಕ್ಕಿಂತಲೂ ಮುಖ್ಯವಾದ ಹಣಶಕ್ತಿಯಿಲ್ಲನೆ ಇದ್ದರೆ, ಇನ್ನಾವಶಕ್ತಿಯಿದ್ದೂ ಏನು ಪ್ರಯೋಜನವಾದೀತು ? ಹಸುವಿನ ಮುಂದೆ ಹುರುಳಿ ಇಟ್ಟು ಮುಖ ಕಟ್ಟಿ ಅದನ್ನು ತಿನ್ನು ತಿನ್ನು ಎಂದರೆ ಏನು ತಿಂದೀತು ? ಮೈಸೂರು ದೇಶದ ಭೂಕಂದಾಯದಲ್ಲಿ 1/5 ಭಾಗವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೆ ಕೊಡುತ್ತೇವೆಂದು ಆಕಿನಲ್ಲದೆ. ಅದರ ಮೇಲೆ ನಾವು 32,000 ರೂಪಾಯಿಗಳು ಬರುತ್ತವೆಂದು ಒಂದು ಸ್ಕೀಮ್ ತಯಾರಿಸಿ ಕೌನ್ಸಿಲ್ಲಿನ ಮುಂದಿಟ್ಟೆವು. ಕೌನ್ಸಿಲ್‌ನವರು ಸಂತೋಷದಿಂದ ಅದನ್ನು ಮಂಜೂರು ಮಾಡಿದರು. ಅದರಂತೆ ಕೆಲಸಮಾಡಿದೆವು. ಕೊನೆಯಲ್ಲಿ ಕೆಲಸ ಮಾಡಿಸುವಾಗ್ಗೆ ನಮಗೆ ಬಂದಿದ್ದೇನು ! 720 ರೂಪಾಯಿಗಳು ? 32,000 ರೂಪಾಯಿಗಳೆಲ್ಲಿ, 720 ರೂಪಾಯಿಗಳೆಲ್ಲಿ ! ಇದನ್ನು ನೋಡಿ ಎಲ್ಲರೂ ಅಸಮಾಧಾನಪಟ್ಟರು. ಹೀಗಾದರೆ ಕೆಲಸ ಹೇಗೆ ನಡೆದೀತು ? ಆದ್ದರಿಂದ ಸರ್ಕಾರದವರು ಕೊಡಬೇಕಾದ ಹಣವನ್ನು ಕೊಡುವುದು ಅವರ ಆದ್ಯ ಕರ್ತವ್ಯ.

ಶ್ರೀಮಾನ್ ಗಾಂಜಿ ವೀರಪ್ಪನವರು ಇನ್ನೊಂದು ವಿಷಯವನ್ನು ಒತ್ತಿ ಹೇಳಿದರು. ಕೋ-ಆಪರೇಟಿವ್ ಸೊಸೈಟಿಗಳ ಮೇಲೆ ಹತೋಟಿ ಜಾಸ್ತಿ ಇಡಬೇಕೆಂದು ಹೇಳಿದರು. ನಾನು ಕೋ-ಆಪರೇಟಿವ್ ಸೊಸೈಟಿ ವಿಷಯದಲ್ಲಿ ಅನುಭವ ಪಡೆದವನಾಗಿ ಹೇಳುತ್ತಿದ್ದೇನೆ. ಅವರು ಹೇಳಿದ್ದು ಹತೋಟಿಯಿಟ್ಟುಕೊಳ್ಳದೆಯಿದ್ದರೆ ಬಹಳ ಕಷ್ಟವಾಗುತ್ತದೆ ಎಂದು. ಆದರೆ, ನನ್ನ ಅನುಭವದಲ್ಲಿ, ಹತೋಟಿ ಜಾಸ್ತಿಯಾಗಿ ನಮ್ಮ ಕೆಲಸ ಕುಂಠಿತವಾಗಿದೆ. ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡುವಾಗ ೫೦೦ ರೂಪಾಯಿ ಡಿಪಾಜಿಟ್ ಇಡಬೇಕೆಂದಿದ್ದುದನ್ನು ಈಗ ಒಂದು ಸಾವಿರ ರೂಪಾಯಿಗಳು ಮಾಡಿದೆ. ಸೆಮಿನಾರ್‌ಗಳ ಮೂಲಕ, ಅರ್ಜಿಗಳ ಮೂಲಕ, ಸರ್ಕಾರವನ್ನು ಎಷ್ಟು ಕೇಳಿಕೊಂಡರೂ ಸರ್ಕಾರ ಲಕ್ಷ್ಯ ಕೊಟ್ಟಿಲ್ಲ. ಇದಾದ ನಂತರ ಸರ್ಕಾರದವರು ಡೈರೆಕ್ಟರುಗಳನ್ನು ನಾಮಿನೇಷನ್ ಮೂಲಕ ತಂದು ಹಾಕುವುದು ಬಂತು, ಈ ಡೈರೆಕ್ಟರುಗಳು ಬಂದು ಎಷ್ಟು ಸಾಲ ತೆಗೆಯುವುದಕ್ಕೆ ಸಾಧ್ಯವೋ ಅಷ್ಟೂ ಕೊಟ್ಟು ಬಿಟ್ಟು ಎಲ್ಲರನ್ನೂ ಡಿಫಾಲ್ಟರುಗಳಾಗಲು ಅವಕಾಶ ಮಾಡಿ ಇನ್ನು ಹತ್ತು ವರ್ಷವಾದರೂ ಸೊಸೈಟಿಯು ನಡೆಯದಂತೆ ಮಾಡಿ, ಹೊರಟುಹೋಗಿದ್ದಾರೆ. ಈ ರೀತಿ large sized ಸೊಸೈಟಿಗಳಲ್ಲಿ ಕೆಲಸ ಮಾಡೋಣವೆಂದರೆ ಸರ್ಕಾರದವರು Interfere ಆಗಿದ್ದಾರೆ. ಯಾರು ಡಿಫಾಲ್ಟರುಗಳಾಗಿದ್ದಾರೋ ಅವರನ್ನೇ ನಾಮಿನೇಟ್ ಮಾಡುತ್ತಾರೆ. ಹೀಗೆ ಡಿಫಾಲ್ಟರುಗಳನ್ನು ನಾಮಕರಣಮಾಡಿ ಸೊಸೈಟಿಯನ್ನು ಉದ್ಧಾರ ಮಾಡಿ ಎಂದರೆ ಆ ಸೊಸೈಟಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಹೇಳಿ. ಹೀಗಾಗಿ ಅನೇಕ ಸೊಸೈಟಿಗಳಲ್ಲಿ ಸಾಲ ಹೆಚ್ಚಾಗಿ ನಿಂತಿವೆ. ವಸೂಲುಮಾಡುವುದೇ ಕಷ್ಟವಾಗಿದೆ. ಮಂತ್ರಿಗಳು ಬಂದಾಗ ಹೇಳುತ್ತಾರೆ, 'ಎಲ್ಲರೂ ಶಕ್ತಿ ಒಂದುಗೂಡಿಸಿ ಕೆಲಸ ಮಾಡಿ' ಎಂದು. ಆದರೆ ಆ ಶಕ್ತಿ ಯಾರಲ್ಲಿದೆ ? ಸೊಸೈಟಿ ಒಂದು ದಾವೆ ಹಾಕಿದರೆ, ಸರ್ಕಾರಿ ಆರ್ಬಿಟ್ರೇಟರುಗಳನ್ನು ಕಳುಹಿಸುತ್ತಾರೆ. ಎರಡು, ಮೂರು ತಿಂಗಳಾದರೂ ಈ ಆರ್ಬಿಟ್ರೇಟರುಗಳು ಡಿಕ್ರಿಯನ್ನು ಜಾರಿಗೆ ಕೊಡುವುದಿಲ್ಲ. ಹೀಗೆ ಪ್ರತಿಯೊಂದು ಶಕ್ತಿಯನ್ನೂ ಸರ್ಕಾರ ಇಟ್ಟು ಕೊಂಡು ನಮ್ಮ ಕೆಲಸ ಮಾಡಿ ಎಂದರೆ ಬಹಳ ಕಷ್ಟ. De-centralisation of Power ಮಾಡಿ, ಪೂರ್ತಿ ನಮಗೆ ಅಧಿಕಾರ ಕೊಟ್ಟರೆ ಒಳ್ಳೆಯದು.

10-30 A.M.

ನಮಗೆ ಯಾವ ಅಧಿಕಾರವನ್ನೂ ಕೊಡದೆ, ಎಲ್ಲ ಅಧಿಕಾರವನ್ನೂ ತಮ್ಮ ಕೈಯಲ್ಲಿಯೇ ಇಟ್ಟುಕೊಂಡು ನಮ್ಮನ್ನು ಸುಮ್ಮನೆ ಅಧಿಕಾರಿಗಳಾಗಿ ಮಾಡಿದರೆ ಅದರಿಂದ ಯಾವ ಕೆಲಸವಾದೀತು ? ಪ್ರಜಾಪ್ರಭುತ್ವದಲ್ಲಿ ಇದರಿಂದೇನೂ ನಡೆಯುವುದಿಲ್ಲ. ದಯವಿಟ್ಟು ಸರ್ಕಾರದವರು ಆದಷ್ಟು ಮಟ್ಟಿಗೆ ನಮಗೂ ಅಧಿಕಾರವನ್ನು ಕೊಟ್ಟು ನೋಡಬೇಕು ಎಂಬುದಾಗಿ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The House will now rise and meet after half-an-hour.

The House adjourned for recess at Three Minutes past Ten of the Clock and re-assembled at Thirty Minutes past Ten of the Clock.

[MR. SPEAKER in the Chair]

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಈ ನೀರಾವರಿ ಯೋಜನೆಯ ವಿಚಾರವಾಗಿ ಪ್ರತಿವರ್ಷವೂ ಸರ್ಕಾರದ ಅಧಿಕಾರಿಗಳು ಡಿಸೆಂಬರ್ ಮಾಹೆಯಲ್ಲಿ ಒಂದ್ಸು

ಪತ್ರಿಕೆಯನ್ನು ಹೊರಡಿಸಿ ತಾಲ್ಲೂಕಿನ ಜನತೆಗೆ ತಿಳಿಸುತ್ತಾರೆ. ಆದರೆ ಈ ವರ್ಷ ಇಂಥಂಥ ಕೆಲಸಗಳನ್ನು ಮಾಡುತ್ತಿದ್ದೇವೆ, ಇಂಥಿಂಥ ಕೆರೆಗಳ ರಿಪೇರಿಯನ್ನು ನಡೆಸುತ್ತಿದ್ದೇವೆ ಎಂಬುದಾಗಿ ಅವರು ತಿಳಿಸಿದ್ದರೆ ನನಗೆ ಸಂತೋಷವಾಗಿರುತ್ತಿತ್ತು. ಹಿಂದೆ ಇದ್ದ ಮಂತ್ರಿಗಳು ಪ್ರಕೃತಿಯ ಮೇಲೆ ಒಂದು ಚಾಲೆಂಜ್ ಮಾಡಿ ಆಕಾಶದಿಂದ ಬರತಕ್ಕ ಮಳೆಯನ್ನು ತಡೆಗಟ್ಟಿ ಅದು ರೈತರಿಗೆ ಉಪಯೋಗವಾಗುವ ರೀತಿಯಲ್ಲಿಮಾಡುತ್ತೇವೆಂಬುದಾಗಿ ಹೇಳಿದರು. ಅವರು ಮಾಡಿದ್ದು ಏನೂ ಸವಾಧನವಾಗಲಿಲ್ಲ. ಈಗ ಪ್ರತಿ ವರ್ಷವೂ ಯಾವ ರೀತಿ ನಮಗೆ ಒಂದು ಪತ್ರಿಕೆಯ ಆ ಮೂಲಕ ಬಗ್ಗೆ ತಿಳಿಸಿದ್ದಾರೋ ಅದನ್ನಾದರೂ ಇದುವರೆಗೆ ಕಾರ್ಯರೂಪಕ್ಕೆ ತಂದಿಲ್ಲ. ಯಾವ ಕೆರೆಗಳ ರಿಪೇರಿಯನ್ನೂ ಮಾಡಿಸಿಲ್ಲ. ಆದ್ದರಿಂದ ಪ್ರತಿವರ್ಷವೂ ಕೆರೆಗಳ ರಿಪೇರಿ ಮಾಡಿಸಿ ನಮ್ಮ ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಿಸಬೇಕು ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈಗ ಸುಮಾರು 15 ಕೆರೆಗಳ ರಿಪೇರಿ ಮಾಡಿಸುತ್ತೇವೆಂದು, ಹೇಳಿದ್ದಾರೆ. ಕೇವಲ ಐದು ಕೆರೆಗಳ ರಿಪೇರಿ ಮಾಡಿದರೆ ಸಾಕು. ನಮಗೆ ಎಷ್ಟೋ ಸಂತೋಷವಾಗುತ್ತದೆ. ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಗೊತ್ತುಮಾಡಿರುವ ಹಣ ಏನಾಗುತ್ತದೋ ಗೊತ್ತಿಲ್ಲ. ಕೆರೆಗಳ ಹೆಸರನ್ನು ಪ್ರತಿವರ್ಷವೂ ಸುಮ್ಮನೆ ಬಾಯಲ್ಲಿ ಹೇಳುತ್ತಾ ಇದ್ದಾರೆಯೇ ಹೊರತು ನಾವು ಹೇಳಿದ ರೀತಿಯಲ್ಲಿ ಆ ಕೆರೆಗಳು ಸ್ವಲ್ಪವೂ ರಿಪೇರಿಯಾಗಿ ಕಾರ್ಯರೂಪಕ್ಕೆ ಬರಲಿಲ್ಲವೆಂಬುದು ನನ್ನ ಅನುಭವವಾಗಿದೆ. ಅದೂ ಅಲ್ಲದೆ ಪ್ರತಿವರ್ಷವೂ ಡಿಸೆಂಬರ್ ತಿಂಗಳಲ್ಲಿ ನೀರಾವರಿ ಯೋಜನೆ ಸಪ್ತಾಹ ಎಂದು ಮಾಡುತ್ತಾರೆ, ಆ ಕಾಲದಲ್ಲಿ ಅನೇಕ ಮುಖಂಡರುಗಳನ್ನು ಮತ್ತು ಅಸೆಂಬ್ಲಿ ಮೆಂಬರುಗಳನ್ನು ಅಲ್ಲಲ್ಲಿಗೆ ಕರೆದುಕೊಂಡು ಹೋಗಿ ಅನೇಕ ಕೆರೆಗಳ ಪ್ರಾರಂಭೋತ್ಸವವನ್ನು ಮಾಡುತ್ತಾರೆ. ಸುಮ್ಮನೆ ಕೆರೆಗಳ ಪ್ರಾರಂಭೋತ್ಸವ ಮಾಡಿದರೆ ಸಾಲದು ; ಆ ಕೆರೆಗಳ ರಿಪೇರಿ ಕೆಲಸವನ್ನು ಕೂಡಲೆ ಕೈಗೊಂಡರೆ ಒಂದೊಂದು ತಾಲ್ಲೂಕಿಗೂ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಕೆರೆಯ ಕೆಲಸವನ್ನು ಪ್ರಾರಂಭ ಮಾಡಿ ಅರ್ಧಮರ್ಧವಾಗಿ ಆ ಕೆಲಸವನ್ನು ಅಲ್ಲಿಗೇ ಬಿಟ್ಟು ಬಿಟ್ಟು ಹಣವಿಲ್ಲ, ಆ ಬಾಬಿಗೆ ಹಣವನ್ನು ಒದಗಿಸಲಿಕ್ಕಾಗಲಿಲ್ಲ ಎಂದು ಹೇಳುವ ಸರ್ಕಾರದ ನೀತಿ ಯಾವುದೂ ನನಗೆ ಅರ್ಥವಾಗಲಿಲ್ಲ. ಯಾವ ಒಂದು ಭರವಸೆಯನ್ನು ದೇಶದ ಜನತೆಗೆ ಒಂದು ಪುಸ್ತಕದ ಮೂಲಕ ಸರ್ಕಾರದವರು ಈ ನೀರಾವರಿ ಯೋಜನೆಯ ಸಪ್ತಾಹ ಸಂದರ್ಭದಲ್ಲಿ ಕೊಡುತ್ತಾರೆಯೊ ಆ ಭರವಸೆಯನ್ನು ಖಂಡಿತವಾಗಿ ಅವರು ಈಡೇರಿಸಿ ಕೊಡಬೇಕೆಂದು ನನ್ನ ಪ್ರಾರ್ಥನೆ.

ಇನ್ನು "Welfare of scheduled caste" ಎನ್ನುವ ಬಗ್ಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ. ಅವರು ಈ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ಕಳೆದ ವರ್ಷದಲ್ಲಿ ಹರಿಜನ ಮತ್ತು ಗಿರಿಜನಗಳಿಗೆ ಕೊಡಬೇಕಾದ ಅನುಕೂಲಗಳನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಆ ಸೌಕರ್ಯಗಳನ್ನು ಕೊ-ಆಪರೇಟಿವ್ ಸೊಸೈಟಿಯ ಮೂಲಕ ಕೊಡುತ್ತೇವೆಂದು ಹೇಳಿದ್ದರು. ಇದುವರೆಗೂ ಏನನ್ನೂ ಮಾಡಿಲ್ಲ. ಅದರ ಬೈಲಾ ಕಾಪಿಗಳ ಈಗ್ಗೆ ಒಂದು ವರ್ಷ ಕಳೆದರೂ ಕೂಡ ನಮಗೆ ದೊರಕದಂತೆ ಮಾಡಿದ್ದಾರೆ ಈಗಲಾದರೂ ಆ ಬೈಲಾಗಳನ್ನು ನಮಗೆ ಒದಗಿಸಿ ಕೊಟ್ಟು ಆ ಮುಖಾಂತರ ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ದಯಪಾಲಿಸಿದ ಭಾಷಣದಲ್ಲಿ ಮುಂದೆ ನಾವು ಮಾಡತಕ್ಕಂಥ ಕೆಲಸ ಕಾರ್ಯಗಳ ಯೋಜನೆಯನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನಮೂದಿಸಿದ್ದಾರೆ. ಶ್ರೀಮಾನ್ ಗಾಂಜಿ ವೀರಪ್ಪನವರು ರಾಜ್ಯಪಾಲರಿಗೆ ವಂದನೆಯನ್ನು ಅರ್ಪಿಸಬೇಕೆಂದು ತಂದಿರುವ ನಿರ್ಣಯವನ್ನು ನಾನು ಅನುಮೋದಿಸುತ್ತಾ ರಾಜ್ಯಪಾಲರು ಹೇಳಿರತಕ್ಕ ವಿಷಯದಲ್ಲಿ ಕೆಲವನ್ನು ಮಾತ್ರ ತಿಳಿಸಲು ಇಚ್ಛಿಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದನ್ನೆಲ್ಲಾ ನಾನು ಬಹಳ ಕುತೂಹಲದಿಂದ ಮತ್ತು ಶ್ರದ್ಧೆಯಿಂದ ಕೇಳಿದೆ. ಆದರೆ ಅವರು ರಚನಾತ್ಮಕವಾಗಿ ಯಾವ ಟೀಕೆಗಳನ್ನೂ ಮಾಡದೆ ಸುಮ್ಮನೆ ಜನರಲ್ಲಾಗಿ ಲಂಚ ಜಾಸ್ತಿಯಾಗಿದೆ ಅದರ ನಿವಾರಣೆಗೆ ಯಾವ ಸ್ಕೀಮನ್ನೂ ಮಾಡಲಿಲ್ಲ ಎಂದು ಹೇಳಿದರು. ಇಂಗ್ಲಿಷ್‌ನಲ್ಲಿ ಹೇಳುವ ಹಾಗೆ ವೇಗ್ ಕ್ರಿಟಿಸಿಜಮ್ಸ್ ಮಾಡಿದ್ದಾರೆ. ನಿರ್ದಿಷ್ಟವಾಗಿ ಸರ್ಕಾರದ ದೋಷಗಳನ್ನು ಎತ್ತಿ ಹಿಡಿದು ಸರ್ಕಾರ ಮಾಡತಕ್ಕ ಕೆಲಸಕಾರ್ಯಗಳಲ್ಲಿ ಯಾವ ತಪ್ಪು ಇದೆ, ಯಾವ ದೋಷವಿದೆ, ಯಾವ ರೀತಿ ಸರ್ಕಾರ ಮಾನ್ಯತೆ ಕೊಡಬೇಕು, ತಪ್ಪುಮಾಡಿದರೆ ಅದನ್ನು ಯಾವ ರೀತಿ ತಿದ್ದಿಕೊಳ್ಳಬೇಕು, ಸರಿಮಾಡಿ ಕೊಳ್ಳಬೇಕು ಎಂಬ ಬಗ್ಗೆ ರಚನಾತ್ಮಕವಾದ ಸಲಹೆಗಳನ್ನು ಮಾನ್ಯ ಶ್ರೀ ಶಿವಪ್ಪನವರು ಕೊಟ್ಟಿದ್ದರೆ ಸರ್ಕಾರದವರು ಅವುಗಳಿಗೆ ಎಷ್ಟು ಮಾನ್ಯತೆ ಕೊಡಬೇಕೋ ಅಷ್ಟನ್ನು ಕೊಡುತ್ತಿದ್ದರು. ಮಾನ್ಯ ವಿರೋಧ ಪಕ್ಷದವರು ಸಹ ಪ್ರಜಾಪ್ರಭುತ್ವದಲ್ಲಿ ನಿರ್ದಿಷ್ಟವಾದ ಸ್ಥಾನಮಾನಗಳನ್ನು ಹೊಂದಿದ್ದಾರೆ. ಪ್ರಜೆಗಳ ವಿಶ್ವಾಸ, ಪ್ರೀತಿಯನ್ನು ಸಂಪಾದನೆ ಮಾಡಬೇಕಾದರೆ ವಿರೋಧ ಪಕ್ಷದವರಿಗೂ ಸಹ ಸರ್ಕಾರದ ಆಡಳಿತ ಮಾಡತಕ್ಕ ಗುರುತರವಾದ ಜವಾಬ್ದಾರಿ ಇರುತ್ತದೆ. ವಿರೋಧ ಪಕ್ಷದ ಸದಸ್ಯರೂ ಸಹ ಹೆಚ್ಚಿನ ರೀತಿಯಲ್ಲಿ ರಚನಾತ್ಮಕವಾದ ಸಲಹೆಗಳನ್ನು ಕೊಡುವ ಹಾಗೆ ಮಾತನಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅವರ ಟೀಕೆ ಟಿಪ್ಪಣಿಗಳಲ್ಲಿ ಉತ್ತರ ಕೊಡತಕ್ಕ ವಿಷಯಗಳು ಅಷ್ಟಾಗಿ ಇಲ್ಲದೇ ಇರುವುದರಿಂದ ಮತ್ತು ನಿರ್ದಿಷ್ಟವಾದ ಟೀಕೆಗಳೂ ಸಹ ಅಷ್ಟಾಗಿ ಬಾರದೇ ಇರುವುದರಿಂದ ಅದನ್ನು ಅಷ್ಟಕ್ಕೇ ಬಿಟ್ಟು ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಹಾಗೆ, ದೇಶವನ್ನು ಸುಖೀ ರಾಜ್ಯವನ್ನಾಗಿ ಮಾಡಬೇಕೆಂಬ ನೀತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡಬೇಕು. ಇದನ್ನು ನಾವು ಬಹು ದೂರ ದೃಷ್ಟಿಯಿಂದ ಆಲೋಚನೆ ಮಾಡಿ ಮಾಡಿದ್ದೇವೆ, ಎಂಬುದಾಗಿ ಹೇಳಿದ್ದರೆ ಚೆನ್ನಾಗಿತ್ತು. ಪವರ್ ಸ್ಕೀಂ ಇರ್ರಿಗೇಷನ್ ಕೆಲಸ ಕಾರ್ಯಗಳು, ಬಸ್ಸುಗಳ ರಾಷ್ಟ್ರೀಕರಣ, ಭೂಸುಧಾರಣೆ ಮತ್ತು ವಿದ್ಯಾಭ್ಯಾಸ–ಹೀಗೆ ಪ್ರಾಮುಖ್ಯವಾದ ವಿಚಾರಗಳಲ್ಲಿ ರಚನಾತ್ಮಕವಾದ ಸಲಹೆಗಳನ್ನು ವಿರೋಧಪಕ್ಷದವರು ನೀಡಿದ್ದರೆ ಬಹಳ ಚೆನ್ನಾಗಿತ್ತು. ಇನ್ನು ವಿದ್ಯಾಭ್ಯಾಸ ವಿಷಯದಲ್ಲಿ ಮಾತನಾಡುವುದಾದರೆ ಬಹಳ ಮುಖ್ಯವಾಗಿ ಈ ಪ್ರಜಾಪ್ರಭುತ್ವವನ್ನು ಬೆಳೆಸುವುದಕ್ಕೆ ಅದರಲ್ಲೂ ಕೂಡ ಹಿಂದುಳಿದವರನ್ನು ಮುಂದೆ ತಂದು ಅವರ ಸ್ಥಿತಿಯನ್ನು ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಈ ಕರ್ನಾಟಕದಲ್ಲಿ ವಿದ್ಯಾಭ್ಯಾಸ ಚೆನ್ನಾಗಿ ನಡೆಯಬೇಕು. ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ, ಪ್ರೈಮರಿ ವಿದ್ಯಾಭ್ಯಾಸವನ್ನು ಒತ್ತಾಯ

(ಶ್ರೀ ಡಿ. ಎಂ. ಸಿದ್ದಯ್ಯ)

ಮಾಡಬೇಕು. ಅದನ್ನು 61ನೇ ಆಕ್ಟ್ ಪ್ರಕಾರ ಜಾರಿಗೆ ತಂದಿದ್ದೀರಿ. ಅದನ್ನು ಪ್ರೋತ್ಸಾಹ ಮಾಡುವುದಕ್ಕೋಸ್ಕರ ಏನೇನು ವ್ಯವಸ್ಥೆಗಳನ್ನು ಮಾಡಬೇಕೋ ಅದನ್ನೆಲ್ಲಾ ಈಗಾಗಲೇ ಮಾಡಿದ್ದಾರೆ. ಇನ್ನು ಮಿಡ್ಡೇ ಮೀಲ್ಸ್, ಪುಸ್ತಕಗಳನ್ನು ಬಡಮಕ್ಕಳಿಗೆ ಒದಗಿಸಿ ಕೊಟ್ಟಿದ್ದಾರೆ. ಈ ವರ್ಷ ಕೇವಲ 12 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಆ ಬಾಬಿಗೆ ಒದಗಿಸಿದ್ದಾರೆ. ಇದು ಬಹಳ ಕಡಮೆ ಎಂದು ನಾನು ಹೇಳುತ್ತೇನೆ. ಈಗ ನಾವು ಸುಖೀ ರಾಜ್ಯದ ಕಡೆಗೆ ದೇಶವನ್ನು ತೆಗೆದುಕೊಂಡು ಹೋಗಬೇಕಾಗಿದೆ. ಈ ದೇಶವನ್ನು ಸುಖೀ ರಾಜ್ಯದ ಕಡೆಗೆ ಒಯ್ಯುವಾಗ ದೇಶದಲ್ಲಿ ಜನರಿಗೆ ಏನೇನು ಕಷ್ಟಗಳಿವೆ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಸಹಾಯ ಮಾಡಬೇಕಾಗಿದೆ ಎಂದು ನಾನು ಸರ್ಕಾರಕ್ಕೆ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿಶ್ವವಿದ್ಯಾನಿಲಯದ ವಿಷಯವಾಗಿ ಒಂದು ಮಾತನ್ನು ಹೇಳುವುದು ಅವಶ್ಯಕವಾಗಿದೆ. ವಿಶ್ವವಿದ್ಯಾನಿಲಯವನ್ನು ಸರ್ಕಾರ ಬೇರ್ಪಡಿಸಿ ಅಟಾನಮಸ್ ಮಾಡಿ ಸಿಂಡಿಕೇಟಿನೊಡನೆ ವ್ಯವಹಾರ ಮಾಡುವಂತೆ ಮಾಡಬೇಕು. ಮೊನ್ನೆ ದಿನ ಈ ಬಗ್ಗೆ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಎಲ್ಲರೂ ಈ ಮಸೂದೆ ಪೀಸ್‌ಮೀಲ್ ಎಂದು ಅಭಿಪ್ರಾಯಪಟ್ಟರು, ನಾನೂ ಕೂಡ ಹಾಗೆಯೇ ಅಭಿಪ್ರಾಯಪಡುತ್ತೇನೆ. ವಿಶ್ವವಿದ್ಯಾನಿಲಯವನ್ನು ಬೇರ್ಪಡಿಸಿ ಪವಿತ್ರವಾದ ಜ್ಞಾನಭಂಡಾರವನ್ನು ನಿರ್ಮಿಸಲು ತಕ್ಕ ಸಂಶೋಧನೆಗಳನ್ನು ನಡೆಸಿ ಜ್ಞಾನವನ್ನು ಬೆಳಸಬೇಕು. ಜೊತೆಗೆ ಅಲ್ಲಿ ಕನ್ನಡದಲ್ಲಿಯೇ ಪಾಠ ಪ್ರವಚನಗಳನ್ನು ಬೋಧನೆ ಮಾಡಬೇಕು. ಪಠ್ಯ ಪುಸ್ತಕಗಳನ್ನು ವಿಶೇಷ ತರಹ ರೀತಿಯಲ್ಲಿ ರಚನೆ ಮಾಡುವುದಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಪ್ರೈಮರಿ ಎಜುಕೇಷನ್ ಮತ್ತು ಅಡಲ್ಟ್ ಎಜುಕೇಷನ್ ಸರಿಯಾಗಿ ಸರ್ಕಾರದವರು ನಡೆಸದಿದ್ದ ಪಕ್ಷದಲ್ಲಿ ದೇಶದಲ್ಲಿ ಇನ್ನೂ ತೊಂದರೆಯಾಗುತ್ತದೆ. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಹೆಚ್ಚಿಗೆ ಹಣ ಖರ್ಚುಮಾಡಬೇಕು. ಹೆಚ್ಚು ಶ್ರದ್ಧೆಯನ್ನೂ ಸಹ ವಹಿಸಬೇಕು ಎಂಬುದಾಗಿ ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ವಾಟರ್ ಡಿಸ್‌ಪ್ಯೂಟ್ ವಿಷಯ. ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯ ಸಮಸ್ಯೆ ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ಈಗಾಗಲೇ ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಪ್ರಶ್ನೆಯ ಬಗ್ಗೆ ಹಿಂದೆ ಮರಾಮತ್ ಶಾಖೆಯ ಮಂತ್ರಿಯಾಗಿದ್ದಂಥ ಶ್ರೀಮಾನ್ ಚೆನ್ನಬಸಪ್ಪನವರು ಬಹಳ ಶ್ರದ್ಧೆವಹಿಸಿ ಕೆಲಸ ಮಾಡಿದ್ದೇನೆಂಬುದಾಗಿ ಈ ಸಭೆಯಲ್ಲಿಯೇ ಹೇಳಿದ್ದಾರೆ. ಅದಕ್ಕಾಗಿ ನಾನು ಬಹಳ ಹೆಮ್ಮೆ ಪಡುತ್ತೇನೆ.

ಅಷ್ಟೇ ಅಲ್ಲ, ಅವರು ದೆಹಲಿಗೂ ಕೂಡ ಹೋಗಿ ಸಂಬಂಧಪಟ್ಟ ಇರಿಗೇಷನ್ ಮಂತ್ರಿಗಳಲ್ಲಿ ಮಾತುಕತೆ ನಡೆಸಿದಾಗ ಕೃಷ್ಣಾ-ಗೋದಾವರಿ ನೀರು ಮೈಸೂರು ಸಂಸ್ಥಾನಕ್ಕೆ ಲಭ್ಯವಾಗಬೇಕೆಂದು ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಇವೊತ್ತು ಆಲೋಚನೆ ಮಾಡಿದ ಪಕ್ಷದಲ್ಲಿ ಗುಲ್ಹಾಟಿ ಕಮೀಷನ್‌ಗೆ ಅವರು ಕೊಟ್ಟ ಅರ್ಜಿ ತಿರಸ್ಕೃತವಾಗಿ ಕೇಂದ್ರ ಸರ್ಕಾರ ಟ್ರಿಬ್ಯೂನಲ್ ರಚನೆ ಮಾಡುವುದಕ್ಕೆ ಒಪ್ಪಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಅಷ್ಟೇ ಅಲ್ಲ ಆಂಧ್ರ ಸರ್ಕಾರದ ಮರಾಮತ್ತು ಶಾಖೆಯ ಸಚಿವರು ಹಾಗೂ ಮುಖ್ಯ ಮಂತ್ರಿಗಳ ಮಾತು ಗಮನದಲ್ಲಿಟ್ಟುಕೊಂಡರೆ ಕೃಷ್ಣಾ-ಗೋದಾವರಿ ನೀರಿನ ಹಂಚಿಕೆಯ ವಿಷಯ ಯಶಸ್ವಿಯಾಗುವುದು ಬಹಳ ಕಷ್ಟ ಎಂದು ಅನಿಸುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವೊತ್ತು ಅದನ್ನು ಮಾನ್ಯ ಚೀಫ್ ಮಿನಿಸ್ಟರ್ ಡಿನೈ ಮಾಡಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮುಖ್ಯ ಮಂತ್ರಿಗಳು ಈ ದಿನ ಸಭೆಯಲ್ಲಿ ಇರಬೇಕಾಗಿತ್ತು. ಮರಾಮತ್ತು ಸಚಿವರೂ ಕೂಡ ಹಾಜರಿಲ್ಲ. ಕಾರಣವೇನೊ ಗೊತ್ತಿಲ್ಲ. ಈ ಕೃಷ್ಣಾ-ಗೋದಾವರೀ ನೀರಿನ ಹಿನ್ನೆಲೆ ಏನಾಗಿದೆ ಎಂದರೆ ಇದರ ಬಗ್ಗೆ ಬಹಳ ಪ್ರಭಾವಯುತವಾದ ಶಕ್ತಿಗಳು ಕೆಲಸ ಮಾಡುತ್ತಾ ಇವೆ. ಇವೊತ್ತು ಟ್ರಿಬ್ಯೂನಲ್‌ನಿಂದ ಆಗಲೀ ಅಥವಾ ಗುಲ್ಹಾಟಿ ಕಮೀಷನ್‌ನಿಂದ ಆಗಲೀ ನ್ಯಾಯ ದೊರಕುವುದಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ. ಬಹುಶಃ ಕೃಷ್ಣಾ-ಗೋದಾವರಿ ನೀರು ನಿಜವಾಗಿಯೂ ಮೈಸೂರು ದೇಶಕ್ಕೆ ಅನುಕೂಲವಾಗುವುದಾದರೆ—ನಾನು ಸಾಧಾರಣವಾಗಿ ಅಳತೆ ಹಾಕಿರುವುದರಲ್ಲಿ—ಇದು ಸುಮಾರು ಒಂದು ಕೋಟಿ ಜನಗಳ ಒಂದು ಹಣೆಬರಹನಿರ್ಧರಿಸುವ ವಿಚಾರವಾಗಿದೆ. ಕೃಷ್ಣಾ-ಗೋದಾವರಿ ನೀರನ್ನು ನ್ಯಾಯವಾದ ಹಂಚಿಕೆಯ ಆಧಾರದ ಮೇಲೆತೆಗೆದುಕೊಂಡರೆ 30 ಲಕ್ಷ ಎಕರೆ ನೀರಾವರಿಯಾಗುತ್ತದೆ ಎಂದು ತಜ್ಞರ ಅಭಿಪ್ರಾಯ. ಈ ಒಂದು ಮಹಾ ಕಾರ್ಯವನ್ನು ಸಾಧನೆ ಮಾಡಬೇಕಾದರೆ, ನನಗಾದರೂ ಅನಿಸುತ್ತದೆ, ಸರ್ಕಾರದವರು ಬಹಳ ಧೈರ್ಯವಾಗಿ, ಉತ್ಸುಕತೆಯಿಂದ ಎಲ್ಲಾ ಅಂಕಿ ಅಂಶಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಸರ್ಕಾರಗಳ ಜೊತೆಯಲ್ಲಿ ವ್ಯವಹಾರ ಮಾಡುವುದಲ್ಲದೆ ಎಲ್ಲಾ ತಪ್ಪು ಎಂದೇ ಆದ ಪಕ್ಷದಲ್ಲಿ ಸುಪ್ರೀಂ ಕೋರ್ಟಿಗೂ ಹೋಗಿ ನ್ಯಾಯವಾಗಿ ಬರಬೇಕಾದ ನೀರನ್ನು ಪಡೆಯಬೇಕೆಂದು ಈ ಸಭೆಯ ಮೂಲಕ ಈ ಸಂದರ್ಭದಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಈ ವಿಷಯದಲ್ಲಿ ಮರಾಮತ್ತು ಶಾಖೆಯ ಸಚಿವರು, ಮುಖ್ಯ ಮಂತ್ರಿಗಳು ಮತ್ತು ಸರ್ಕಾರದವರು ಬಹಳ ಸಾಮರ್ಥ್ಯದಿಂದ, ಶಕ್ತಿಯುತವಾಗಿ ಕೆಲಸ ಮಾಡಬೇಕು. ಏಕೆಂದರೆ ಈ ಒಂದು ನೀರಿನ ವಿವಾದದ ವಿಚಾರದಲ್ಲಿ ಆಂಧ್ರ ಸರ್ಕಾರ ಮಾತ್ರವೇ ಅಲ್ಲ ಆಂಧ್ರ ಸರ್ಕಾರದ ಮುಖ್ಯ ಮಂತ್ರಿಗಳಾಗಿರುವವರು ರಾಜಕೀಯ ಸಮ್ಮೇಳನದಲ್ಲಿ ಆಂಧ್ರ ಸರ್ಕಾರಕ್ಕೆ ಅನುಗುಣವಾದ ಭಾಷಣವನ್ನೇ ಮಾಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವರು ಇವೊತ್ತು ಮುಖ್ಯ ಮಂತ್ರಿಗಳಾಗಿದ್ದಾರೆ ಮತ್ತು ಉನ್ನತಸ್ಥಾನದಲ್ಲಿದ್ದಾರೆ. ಆ ಒಂದು ಶಕ್ತಿಯನ್ನು ಎದುರಿಸಿ ನ್ಯಾಯವಾಗಿ ಬರಬೇಕಾದ ನೀರನ್ನು ಪಡೆಯಬೇಕಾದರೆ ಬಹಳ ಸಾಹಸ ಮಾಡಬೇಕು. ಇದು ಸುಪ್ರೀಂ ಕೋರ್ಟಿನಲ್ಲೇ ನಿವಾರಣೆ ಯಾಗಬೇಕೆಂದು ನನಗೆ ಅನಿಸುತ್ತದೆ.

ನಮ್ಮ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತಂದಿದ್ದಾರೆ; ಬಸ್ಸು ರಾಷ್ಟ್ರೀಕರಣ ಮಾಡಿದ್ದಾರೆ. ಈ ವಿಷಯದಲ್ಲಿ ಟೀಕೆ ಬಂದಿದೆ. ಒಂದು ಕಡೆ ಸುಖೀ ರಾಜ್ಯದ ಕಡೆಗೆ ಹೋಗುತ್ತೇವೆ, ಎಂದು ಹೇಳುತ್ತೀರಿ, ಇನ್ನೊಂದು ಕಡೆ ಜನಗಳಿಗೆ ಅನನುಕೂಲ ಮಾಡುತ್ತಿದ್ದೀರಿ ಎಂದು ಎದುರು ಪಕ್ಷದವರು ಆಕ್ಷೇಪಣೆ ಮಾಡಿದರು. ರಾಷ್ಟ್ರೀಕರಣದ ವ್ಯವಸ್ಥೆಯಲ್ಲಿ ಬಹಳ ಲೋಪದೋಷಗಳಿವೆ ಎಂದು ಹೇಳಿದರೇ ಹೊರತು ಆ ತತ್ವವನ್ನು ವಿರೋಧ ಮಾಡಲಿಲ್ಲ. ಅನೇಕ ದೋಷಗಳಿದ್ದರೂ ಅದನ್ನು ಸರಿಪಡಿಸಿಕೊಂಡು

ರಾಷ್ಟ್ರೀಕರಣ ಮಾಡುವ ಕೆಲಸ ಉಳಿದ ಜಿಲ್ಲೆಗಳಲ್ಲೂ ಆಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಬಹಳ ವಿಷಯಗಳಿದ್ದರೂ ಕಾಲಾವಕಾಶವಿಲ್ಲದೆ ಇರುವುದರಿಂದ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ತಮ್ಮ ಹೇಳಿಕೆಯಲ್ಲಿ ನಾವು ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದರ ಸಮೀಪದಲ್ಲಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇದು ಬಹಳ ಜನರಿಗೆ ನಮ್ಮ ಪ್ರಾಂತದಲ್ಲಿ ಅನಿಸಲಾರದು ಎಂದು ಅನಿಸುತ್ತದೆ. ಏಕೆಂದರೆ ಬಹಳ ಜನರು ಬಡತನದಲ್ಲಿ ಸಿಲುಕಿ ನರಳುತ್ತಿರುವಾಗ ಸುಖೀರಾಜ್ಯ ಎಂಬುದು ಬರೀ ಶಬ್ದವಾಗುತ್ತದೆಯೇ ಹೊರತು ಅದರ ಸತ್ಯಾಂಶ ಕಾಣುತ್ತಿಲ್ಲ. ಅನೇಕ ಜನರು ಹಗಲು ಊಟಮಾಡಿದರೆ ರಾತ್ರಿಗೆ ಊಟಕ್ಕಿಲ್ಲದೆ ಹಸಿವಿನಿಂದ ಕಂಗಾಲಾಗುತ್ತಿದ್ದಾರೆ. ಅನೇಕರಿಗೆ ಹೊದೆಯುವುದಕ್ಕೆ ಬಟ್ಟೆ ಇಲ್ಲ, ತೊಡುವುದಕ್ಕೆ ಬಟ್ಟೆ ಇಲ್ಲ. ತಮ್ಮ ಆರೋಗ್ಯ ನೋಡಿಕೊಳ್ಳಲು ಸೌಕರ್ಯವಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಸುಖೀರಾಜ್ಯ ಎಂದರೆ ಇದು ಕೇವಲ ದೊಡ್ಡ ಅಂತಸ್ಥಿನಲ್ಲಿ ಇದ್ದು, ರಾಜಕೀಯ ಧುರೀಣರು ಎಂದು ಅನ್ನಿಸಿಕೊಂಡಿರುವವರಿಗೆ ಅನ್ವಯಿಸಿ ಅವರು ಸುಖದಲ್ಲಿರಬಹುದೇ ಹೊರತು ಜನಸಾಮಾನ್ಯರಿಗೆ ಅನ್ವಯಿಸುವುದಿಲ್ಲ. ನಮ್ಮ ದೇಶದಲ್ಲಿ ಒಕ್ಕಲುತನ ಮಾಡುವ ಹಳ್ಳಿಜನ ಬಹಳಷ್ಟು ಕುಟುಂಬದವರು ಇದ್ದಾರೆ ಎಂದು ಹೇಳಬಹುದು. ಅವರು ಸುಖದಲ್ಲಿಲ್ಲ ಎಂದಮೇಲೆ ಸುಖದಲ್ಲಿರುವವರು ಯಾರು ಎಂಬುದು ತಿಳಿಯುವುದಿಲ್ಲ. ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್ಸ್‌ನಲ್ಲ ಬಹಳ ಹಣ ಖರ್ಚುಮಾಡಿ ದೇಶದಲ್ಲಿನ ಬಡತನ ನೀಗುತ್ತೇವೆ ಎಂದು ಹೇಳಿದ್ದಾರೆ. ಆದರೆ ಆ ಕೆಲಸ ಅಷ್ಟು ಒಳ್ಳೆಯರೀತಿಯಲ್ಲಿ ನಡೆಯುತ್ತಿಲ್ಲ. ಬರಿ ಗಾಳೀಗೋಪುರ ಕಟ್ಟುತ್ತಾ ಇದ್ದೀರಿ. ಕಷ್ಟದಲ್ಲಿ, ಅಡಚಣೆಯಲ್ಲಿ ಸಿಕ್ಕುಬಿದ್ದಿರುವ ಮನುಷ್ಯನಿಗೆ ಏನು ಅವಶ್ಯಕವಾಗಿ ಆಗಬೇಕು ಎಂಬುದನ್ನು ಕಂಡುಹಿಡಿಯುತ್ತಿಲ್ಲ. ರೈತ ಕಷ್ಟದಲ್ಲಿದ್ದಾನೆ. ಕಟ್ಟಡಗಳು, ರಸ್ತೆಗಳ ನಿರ್ಮಾಣ, ದೊಡ್ಡ ದೊಡ್ಡ ಯೋಜನೆಗಳ ಕಡೆಗೆ ನೋಡುತ್ತಾ ಇದ್ದಾರೆಯೋ ಹೊರತು ನಿಜವಾಗಿಯೂ ಯಾವ ಭಾಗದಲ್ಲಿ ಕಷ್ಟ ಇದೆ ಎಂಬುದರ ಕಡೆಗೆ ಲಕ್ಷ್ಯ ಕೊಡುತ್ತಿಲ್ಲ. ಗಾಯ ಇರುವಕಡೆ ಬಿಟ್ಟು ಗಾಯ ಇಲ್ಲದ ಕಡೆ ಮುಲಾಮು ಹಚ್ಚಿದರೆ ಗಾಯ ವಾಸಿಯಾಗುವುದೆಂತು ? ಸುಖದಲ್ಲಿದ್ದವನಿಗೆ ಮಾಡಬೇಕಾದ್ದು ಏನೂ ಇಲ್ಲ. ಪ್ರತಿಯೊಂದು ಕುಟುಂಬದಲ್ಲೂ ಯಾವ ಕೊರತೆ ಇದೆ; ಅವರ ಕಸುಬು ಏನು, ಅವರ ಕಷ್ಟ ಯಾವ ರೀತಿ ನಿವಾರಣೆ ಮಾಡಬೇಕೆಂಬುದರ ಕಡೆಗೆ ಗಮನ ಕೊಟ್ಟಿಲ್ಲ. ಎನ್. ಇ. ಎಸ್. ಎಂದು ಗಾಳೀಗೋಪುರ ಕಟ್ಟಿ ಪ್ರಪಂಚಕ್ಕೆ ಸುಖ ಕೊಡುತ್ತೇವೆ ಎಂದು ಹೇಳಿಕೆ ಕೊಡುವುದು ಗಾಳಿಗೋಪುರವೇ ಹೊರತು ನಿಜವಾಗಿಯೂ ಕಷ್ಟದಲ್ಲಿರತಕ್ಕ ಮನುಷ್ಯನಿಗೆ ಎನ್. ಇ. ಎಸ್. ನಿಂದ ಉಪಯುಕ್ತವಾದ ಕೆಲಸವೇನೂ ನಡೆಯುತ್ತಿಲ್ಲ ಎಂದು ಹೇಳಬಯಸುತ್ತೇನೆ. ನಾವೆಲ್ಲಾ ಚುನಾವಣೆಗಳಲ್ಲಿ ಅರಿವೆ ಇಲ್ಲದ ಮನುಷ್ಯನಿಂದ, ಊಟಕ್ಕೆ ಅನ್ನ ಇಲ್ಲದ ಮನುಷ್ಯನಿಂದ ಅವರ ಮತಗಳನ್ನು ತೆಗೆದುಕೊಂಡು ಇಲ್ಲಿಗೆ ಚುನಾಯಿತರಾಗಿ ಬರುತ್ತೇವೆ. ಆ ಮತ ನೀಡಿದವನ ಪರಿಸ್ಥಿತಿ ಇವೊತ್ತಿನ ದಿವಸ ಏನಾಗಿದೆ? ಅವನಿಗೆ ಏನು ಸೌಕರ್ಯ ಮಾಡುತ್ತಾ ಇದ್ದೇವೆ; ಮನೆ ಇಲ್ಲದವನ, ನೆಲ, ನೆರಳು ಇಲ್ಲದವನ ಗತಿ ಏನಾಗಿದೆ ಎಂದರೆ ಅದು ಬಹಳ ಶೋಚನೀಯ. ಇಂಥಾ ಯೋಜನೆಗಳನ್ನು ಮಾಡುವುದು ಇನ್ನಾದರೂ ನಿಲ್ಲಿಸಬೇಕೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ದೊಡ್ಡ ನೀರಾವರೀ ಯೋಜನೆಗಳಿಗೆ ಹೆಚ್ಚು ಗಮನ ಕೊಟ್ಟಿದ್ದಾರೆ. ಎಂದಮೇಲೆ ಹೆಚ್ಚು ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನೀರಾವರೀ ಯೋಜನೆ ಹಾಕಿ 15 ವರ್ಷ ಆಯಿತು. ಮದ್ರಾಸ್ ಸರ್ಕಾರದಲ್ಲಿದ್ದಾಗ ಬೇಕಾದಷ್ಟು ವ್ಯವಹಾರ ನಡೆಯಿತು. Wet, dry, dry *cum* wet ಎಂದು ಹೇಳಿ ಮೂರು ಭಾಗ ಮಾಡಿದ್ದಾರೆ. ಇದುವರೆಗೂ ಇಂಥಾ ಪ್ರಾಜೆಕ್ಟು ನಮ್ಮ ದೇಶದಲ್ಲಿ ಎಲ್ಲೂ ನಿರ್ಮಾಣವಾಗಿಲ್ಲ. 90 ಸಾವಿರ ಎಕರೆಗೆ ನೀರಾವರಿಯಾಗಬೇಕಾಗಿದ್ದು 30 ಸಾವಿರ ಎಕರೆಗೆ ಮಾತ್ರ ನೀರಾವರಿಯಾಗಿದೆ. 60 ಸಾವಿರ ಎಕರೆ ಹಾಗೆಯೇ ಇದೆ. ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರ ಆಲೋಚನೆ ಮಾಡುತ್ತಿಲ್ಲ. ಮಂತ್ರಿಗಳಿಗೆ ಅನೇಕಸಾರಿ ಕೇಳಿದ್ದೇವೆ. ಡ್ರೈ ಕಂ ವೆಟ್ ಅನ್ನುವುದಕ್ಕೆ ಯಾವ ರೀತಿ ನೀರು ಹರಿಸಬೇಕು; ನೀರು ಸರಿಯಾಗಿ ಕೊಡುತ್ತಿಲ್ಲ ಎಂಬ ವಿಚಾರ ಅನೇಕಸಾರಿ ಚರ್ಚೆಗೆ ಬಂದು ಅದನ್ನು ತಿರುಮಲೆ ಅಯ್ಯಂಗಾರ್ ಅವರ ಕಮಿಟಿಯವರೂ ಕೂಡ ವಿಚಾರ ಮಾಡಿದರು. ಆರೆಂಟು ತಿಂಗಳಾದರೂ ಕೂಡ ಇನ್ನೂ ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಂಡಿಲ್ಲ. ಹೀಗಿರುವಾಗ ಸುಮ್ಮನೆ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿ ಕೋಟಿಗಟ್ಟಲೆ ದುಡ್ಡು ಖರ್ಚು ಮಾಡುವುದರಿಂದ ಪ್ರಯೋಜನವೇನು ಬಂದಂತಾಯಿತು ಎಂದು ಕೇಳುತ್ತೇನೆ. ಹಿಂದೆ ಮಾಡಿದ್ದು ಸರಿಯೋ ಅಲ್ಲವೋ, ಅದನ್ನನುಸರಿಸಿಯೇ ಮಾಡುವುದು ಮಾನ್ಯ ಎಂದು ಅಲ್ಲ. ರೈತನಿಗೆ ನಿಜವಾಗಿಯೂ ಅದರಿಂದ ಒದಗಬೇಕಾದ ಸೌಲಭ್ಯ ಒದಗಿಲ್ಲದೇ ಹೋದಲ್ಲಿ ಅದಕ್ಕೆ ಕಾರಣವೇನು ಎಂಬ ವಿಚಾರವನ್ನು ತಾವು ಯೋಚನೆಮಾಡುವುದು ಯೋಗ್ಯ. ಸುಮ್ಮನೆ ಅಂಕಿಸಂಖ್ಯೆ ಬೆಳೆಸಿ ಬಹಳ ದೇಶ ಮುಂದುವರಿಯುತ್ತಾ ಇದೆ ಎಂದು ತೋರಿಸುವುದನ್ನು ನಿಲ್ಲಿಸಿ. ಇವೊತ್ತು ತುಂಗಭದ್ರಾ ಪ್ರಾಜೆಕ್ಟಿನಿಂದ ಬಳ್ಳಾರಿ ಜಿಲ್ಲೆಯಲ್ಲಿ ವಾಸ್ತವವಾಗಿ ಆಗಿರತಕ್ಕ ಅನಾಹುತ ಏನೆಂಬುದನ್ನು ದಯವಿಟ್ಟು ವಿಚಾರ ಮಾಡಿ ತಿರುಮಲೆ ಅಯ್ಯಂಗಾರ್ ಕಮಿಟಿಯವರು ಮಾಡಿದ ಸಿಫಾರಸಿನ ಮೇಲೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು 60 ಸಾವಿರ ಎಕರೆ ಡ್ರೈ ಕಂ ವೆಟ್ ಕಲ್ಟಿವೇಷನ್‌ಗೆ ಬರಲು ಅನುಕೂಲ ಮಾಡಿಕೊಡಬೇಕು. ದೇಶಕ್ಕೆ ಅದರ ಪ್ರಯೋಜನ ಲಭಿಸುವಂತಾಗಬೇಕು ಎಂದು ಹೇಳುತ್ತಾ ಇದ್ದೇನೆ.

ಸಹಕಾರದಲ್ಲಿ ಏನಾಗಿದೆ ಎಂದರೆ ಇದರಲ್ಲಿ ಎಲ್ಲೆಲ್ಲೂ ರಾಜಕೀಯ ನಡೆದಿರುವಂತೆ ತೋರುತ್ತದೆ. ಇದರಲ್ಲಿ ಡಿಫಾಲ್ಟರ್ ಆದವರು ಡೈರೆಕ್ಟರುಗಳಾಗಿದ್ದಾರೆ ಒಬ್ಬ ಮಾನ್ಯರು ಇದ್ದಾರೆ. ಅವರನ್ನು ನಾಲ್ಕು ಸಂಸ್ಥೆಗಳಿಗೆ ನಾಮಿನೇಟ್ ಮಾಡಿದ್ದಾರೆ. ಒಂದು ಕೋಆಪರೇಟಿವ್ ಸೊಸೈಟಿ; ಒಂದು ಮಾರ್ಟ್‌ಗೇಜ್ ಬ್ಯಾಂಕ್; ಇನ್ನೊಂದು ಸೆಂಟ್ರಲ್ ಬ್ಯಾಂಕು. ಈ ರೀತಿ ಪ್ರತಿಯೊಂದರಲ್ಲೂ ಅವರೊಬ್ಬರನ್ನೇ ಡೈರೆಕ್ಟರಾಗಿ ನಾಮಿನೇಟ್ ಮಾಡಿದ್ದಾರೆ. ಇಂಥಾ ಅನ್ಯಾಯವಾದ ಘೋಷಣೆ ಸರ್ಕಾರ ಮಾಡುತ್ತಾ ಇದೆ ಎಂದು ಪ್ರಬಲವಾದ ಸುದ್ದಿ ಕೇಳಿಬರುತ್ತಾ ಇದೆ. ಅವರು ಯಾರು ಎಂದು ಅವರ ಹೆಸರನ್ನು ಹೇಳುವುದಿಲ್ಲ. ಸರ್ಕಾರದವರು ಇದನ್ನು ಗಮನಿಸಿ ಅವರನ್ನು ಒಂದು ಸಂಸ್ಥೆಗೆ ನಾಮಿನೇಟ್ ಮಾಡಿ ಉಳಿದ ಮೂರಕ್ಕೆ ಬೇರೆಯವರನ್ನು ನಾಮಿನೇಟ್ ಮಾಡುವ ಏರ್ಪಾಡು ಮಾಡಬೇಕು. ಇಂಥಾ ತಪ್ಪನ್ನು ಸರ್ಕಾರ

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಮಾಡಿ ದೇಶವನ್ನು ಕತ್ತಲೆಗೆ ನೂಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಮೈಸೂರಿಗೆ ಸೇರಿದ ಪ್ರದೇಶಗಳಲ್ಲಿ ಮದರಾಸಿನಿಂದ ಬಂದ ಒಂದೇ ಜಿಲ್ಲೆಯೆಂದರೆ, ಅದು ಬಳ್ಳಾರಿ ಜಿಲ್ಲೆ. ಆ ಜಿಲ್ಲೆಯನ್ನು ಅಲಕ್ಷ್ಯ ಮಾಡಿದ್ದಾರೆಂದು ಹೇಳಿದರೆ ಅದು ತಪ್ಪಲ್ಲ. ನಮ್ಮ ಪಕ್ಕದಲ್ಲಿರುವ ಆದೋನಿಯಲ್ಲಿ ನಾಲ್ಕು ನೂಲಿನ ಗಿರಣಿಗಳಿವೆ. ಬಳ್ಳಾರಿಯಲ್ಲಿ ಒಂದು ನೂಲಿನ ಗಿರಣಿ ಬೇಕೆಂದು ಕೇಳಿದರೂ ಅದನ್ನು ಕೊಟ್ಟಿಲ್ಲ. ಇದಕ್ಕೆ ಸರ್ಕಾರ ಸಹಾಯ ಮಾಡಬೇಕೆಂದು ಕೇಳುತ್ತೇನೆ.

ಮೆಡಿಕಲ್ ಇಲಾಖೆಯಲ್ಲಿ, ಮೆಡಿಕಲ್ ಕಾಲೇಜುಗಳು ಹಾಗೂ ಆಸ್ಪತ್ರೆಗಳನ್ನು ತೆರೆದಿದ್ದಾರೆ, ಆದರೆ ಡಾಕ್ಟರುಗಳೇ ಇಲ್ಲ. ಜಿ. ಸಿ. ಎ. ಎಮ್. ಕೋರ್ಸನ್ನು ಇಂಟೆಗ್ರೇಟೆಡ್ ಮೆಡಿಸಿನ್ಸ್ ಕೋರ್ಸಿನಲ್ಲಿ ಸೇರಿಸಿ ಎಂದರೆ, ಸೇರಿಸಿಲ್ಲ. ಏಕೆ ಸೇರಿಸಬಾರದು ? ಬಡವರು ತಮ್ಮ ಮಕ್ಕಳನ್ನು ಜಿ. ಸಿ. ಎ. ಎಂ.ಗೆ ಸೇರಿಸಿದ್ದಾರೆ. ಮೊದಲು ಇಂಟೆಗ್ರೇಟೆಡ್ ಮೆಡಿಸಿನ್ಸ್‌ಗೆ ಸೇರಿಸುತ್ತಿದ್ದರು. ಈಗ ಅದನ್ನು ಬದಲಾವಣೆ ಮಾಡಿರುವುದರಿಂದ 350 ಜನ ವಿದ್ಯಾರ್ಥಿಗಳು 90 ದಿನಗಳಿಂದ ಮುಷ್ಕರ ಹೂಡಿದ್ದಾರೆ. ಐದು ವರ್ಷ ಕಾಲ ಅಲೋಪೆಥಿ ವಿಷಯದಲ್ಲಿ ಪಾಠ ಕಲಿತು, ಅವರು ಇಂಜೆಕ್ಷನ್ ಮಾಡಬಾರದು, ಅದಕ್ಕೆ ಅರ್ಹರಲ್ಲ. ಅವರು ಸರ್ಕಾರಿ ಅಲೋಪೆಥಿಕ್ ಆಸ್ಪತ್ರೆಗಳಿಗೆ ಬರಬಾರದೆಂದು ಹೇಳುವುದರಲ್ಲಿ ಅರ್ಥವೇನು ? ನಾಲ್ಕು ವರ್ಷಗಳ ಹಿಂದೆ ಇದ್ದುದನ್ನು ಬದಲಾಯಿಸಿ ಎರಡು ವರ್ಷಗಳ ಹಿಂದೆ ಆಜ್ಞೆ ಮಾಡಿದ್ದಾರೆ. ಇದು ಸರಿಯಲ್ಲ. ಜಿ. ಸಿ.ಎ. ಎಂ. ಕೋರ್ಸನ್ನು ಇಂಟೆಗ್ರೇಟೆಡ್ ಕೋರ್ಸಿನಲ್ಲಿ ಸೇರಿಸಿ, ಮುಷ್ಕರವನ್ನು ಮುಕ್ತಾಯ ಮಾಡಲು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಪಾನನಿರೋಧದಿಂದ ಏನಾಗಿದೆಯೆಂದರೆ, ಅಂಗಡಿಗಳಿಂದ ಮದ್ಯ ಮಾರುವುದರಿಂದ ಸರ್ಕಾರಕ್ಕೆ ಬರುತ್ತಿದ್ದ ವರಮಾನ ಕಡಮೆಯಾಗಿದೆ. ಈಗ ಮನೆಮನೆಗೂ ಒಂದೊಂದು ಊರಿನಲ್ಲಿ ಹತ್ತು ಅಂಗಡಿಗಳಾಗಿವೆ. ಮದ್ಯದ ತಯಾರಿಕೆಗೆ ಬೇಕಾದ ಸಾಮಾನುಗಳನ್ನು ತಂದು ಕಳ್ಳಭಟ್ಟಿ ಸಾರಾಯಿ ತಯಾರುಮಾಡಿ ಕೆಲ ಜನರಿಗೆ ಲಾಭವಾಗುತ್ತಿದೆ, ಆದರೆ ಕುಡಿಯುವ ಜನರಿಗೆ ತೊಂದರೆಯಾಗಿದೆ. ಪೋಲೀಸರಿಗೂ ಕಳ್ಳಭಟ್ಟಿಯವರಿಗೂ ಸಂಬಂಧ ಉಂಟಾಗಿ ಗೂಂಡಾಗಳಿಗೆ ಅನುಕೂಲವಾಗಿದೆ ಮತ್ತು ಅವರು ಸಜ್ಜನರಿಗೆ ಕಷ್ಟಕೊಡುತ್ತಿದ್ದಾರೆ. ಜನರಿಗೆ ಸಾರಾಯಿ ಕುಡಿಸಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಸರ್ಕಾರಕ್ಕೆ ಬರತಕ್ಕ ಆದಾಯವನ್ನೂ ಕಳೆದುಕೊಂಡು, ಕಾನೂನುಬದ್ಧರಾಗಿರುವವರು ಕಾನೂನು ಉಲ್ಲಂಘಿಸಿ ಗೂಂಡಾಗಿರಿ ಮಾಡುವವರ ಕಿರುಕುಳಕ್ಕೊಳಗಾಗುವಂತೆ ಮಾಡಿರುವುದು ಸರಿಯಲ್ಲ. ಕಾನೂನನ್ನು ಉಲ್ಲಂಘಿಸುವ ಗೂಂಡಾಗಳಿಗೂ ಪೋಲೀಸರಿಗೂ ಸ್ನೇಹ ಬೆಳೆದು ಒಳ್ಳೆಯ ಜನರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಅವಕಾಶ ಮಾಡಿರುವುದು ನ್ಯಾಯವಲ್ಲ. ಸರ್ಕಾರ ನೀತಿಗೆ ಸರಿಯಾಗಿ ನಡೆದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕು; ತಮ್ಮ ತಪ್ಪನ್ನು ತಿದ್ದಿಕೊಳ್ಳದೆಯಿದ್ದರೆ ಅದು ಸರಿಯಾದ ಸರ್ಕಾರವಲ್ಲ. ದೇಶದಲ್ಲಿ ಪಾನವಿರಬೇಕು ಅಥವಾ ಬೇಡ ಎಂಬ ಬಗ್ಗೆ ಓಟ್ ಅಥವಾ ಮತ ತೆಗೆದುಕೊಳ್ಳಲಿ. ಅದು ಇರಬೇಕು ಎಂಬ ಬಗ್ಗೆ ಹೆಚ್ಚಿನ ಮತ ಬಂದರೆ ಇಡಲಿ ಇಲ್ಲದಿದ್ದರೆ ತಪ್ಪಿಸಲಿ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದಿಚ್ಛಿಸುತ್ತೇನೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ಹಂತದಲ್ಲಿದ್ದೇವೆ. ಸರ್ಕಾರ ಗೊತ್ತುಪಡಿಸಿರುವಂತೆ 1962–63ನೆಯ ಸಾಲಿನಲ್ಲಿ 42.1 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಕೇವಲ 19 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಶೇಖರಣ ಮಾಡಬೇಕಾಗಿದೆ. ಈ ಹೊತ್ತಿನವರೆಗೂ ನಮ್ಮ ಸರ್ಕಾರದವರು ಈ 19 ಕೋಟಿ ರೂಪಾಯಿಗಳನ್ನು ಯಾವರೀತಿಯಿಂದ ಶೇಖರಣ ಮಾಡುತ್ತಾರೆಂಬುದನ್ನು ತಿಳಿಸಿಲ್ಲ. ಇಲ್ಲಿಯವರೆಗೂ ಈ ವಿಚಾರವನ್ನು ಪರಿಶೀಲನೆ ಮಾಡಿ ಈ ಹಣವನ್ನು ಯಾವರೀತಿ ಶೇಖರ ಮಾಡಬೇಕೆಂಬ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ. ತೀವ್ರವಾಗಿ ಸರ್ಕಾರದವರು ಯೋಚನೆಮಾಡಿ, ಆದಷ್ಟು ಬೇಗ ಈ 19 ಕೋಟಿ ರೂಪಾಯಿಗಳನ್ನು ತೆರಿಗೆಯ ಮೂಲಕ ಅಥವಾ ಇತರ ಬಾಬುಗಳ ಮೂಲಕ ಯಾವರೀತಿ ಜಮಾ ಮಾಡಬೇಕೋ ಆ ರೀತಿ ಮಾಡುವುದರಲ್ಲಿ ತೊಡಗಬೇಕೆಂದು ಸಲಹೆ ಮಾಡುತ್ತೇನೆ.

ನಾವೀಗ ಸುಖೀರಾಜ್ಯದಲ್ಲಿದ್ದೇವೆ. ರಾಜ್ಯದಲ್ಲಿ 263 ಅಭಿವೃದ್ಧಿ ಬ್ಲಾಕುಗಳ ಪೈಕಿ 220 ಬ್ಲಾಕುಗಳನ್ನು ಕೊಟ್ಟಿದ್ದಾರೆ. ಒಂದುಕಡೆಗೆ ಕೊಟ್ಟು ಇನ್ನೊಂದುಕಡೆಗೆ ಇಲ್ಲದೆಯಿರುವುದರಿಂದ ಜನರಿಗೆ ತೊಂದರೆಯಾಗಿದೆ. ಆದುದರಿಂದ ಸರ್ಕಾರದವರು ಜಾಗ್ರತೆಯಾಗಿ ಉಳಿದ ಬ್ಲಾಕುಗಳನ್ನೂ ಪ್ರಾರಂಭ ಮಾಡಿ 1963ರಒಳಗೆ ದೇಶದಾದ್ಯಂತ ಈ ಅಭಿವೃದ್ಧಿ ಬ್ಲಾಕುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ.

ವಿಕೇಂದ್ರೀಕರಣದ ನೀತಿಗನುಗುಣವಾಗಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳನ್ನೂ ತಾಲ್ಲೂಕು ಬೋರ್ಡುಗಳನ್ನೂ ಸ್ಥಾಪಿಸಿದ್ದೇವೆ. ತಾಲ್ಲೂಕು ಬೋರ್ಡುಗಳೂ ಪಂಚಾಯಿತಿಗಳೂ ಕೇವಲ ರಾಜಕೀಯದಿಂದ ತುಂಬಿವೆ. ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂದು ಕೆಲವು ಜನ ಸದಸ್ಯರು ಹೇಳಿದರು. ನಾನಾದರೂ ಇದನ್ನು ನಂಬುವುದಿಲ್ಲ. ಕೆಲವು ಅಪವಾದಗಳಿರಬಹುದು. ಒಂದು ಪಂಚಾಯಿತಿಯಲ್ಲಿ ಜಗಳವಾದಮಾತ್ರಕ್ಕೇ ಎಲ್ಲವೂ ಹೀಗೆಯೇ ಇದೆ ಎಂದು ಹೇಳುವುದನ್ನು ನಾನು ವಿರೋಧಿಸುತ್ತೇನೆ. ಹೆಚ್ಚು ಪಂಚಾಯಿತಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಸಾಮಾನ್ಯವಾಗಿ ಪಂಚಾಯಿತಿಗಳಲ್ಲಿರುವ ಗ್ರಾಮಾಂತರದ ಜನರು ಅಷ್ಟು ಬುದ್ಧಿವಂತರಲ್ಲವೆಂದು ಹೇಳುತ್ತಾರೆ. ಇದು ಹಿಂದಿನಿಂದ ಬಂದಿರುವ ಅಭಿಪ್ರಾಯ. ಈಗ ಅದು ಸರಿಹೋಗುವುದಿಲ್ಲ.

ಈಗ ಆ ಜನರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದಕಾರಣ ಪಂಚಾಯಿತಿಗಳಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಕಾರ್ಯಗಳನ್ನು ಒಪ್ಪಿಸಬೇಕು. ಹಾಗೆ ಮಾಡುವುದರಿಂದ ಅವರಲ್ಲಿ ಇನ್ನೂ ಉತ್ತಮವಾದ ಮನೋಧರ್ಮ ಬೆಳೆಯಲು ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ಮೊದಲನೆಯದಾಗಿ, ಅವರು ತಮ್ಮ ಗ್ರಾಮವನ್ನು ತಾವೇ ಉತ್ತಮವಾಗಿ ಕಟ್ಟಬೇಕೆಂಬ ಒಂದು ರೀತಿಯ ಉತ್ಸಾಹ ಮತ್ತು ಸಮಾಧಾನ ಉಂಟಾಗುತ್ತದೆ. ಎರಡನೆಯದಾಗಿ, ಅವರು ಸ್ವಾವಲಂಬಿಗಳಾಗಿ ಬದುಕಲು ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಅವರಿಗೆ ತರಬೇತಿ ಕೊಟ್ಟಂತಾಗುತ್ತದೆ. ಮೂರನೆಯದಾಗಿ, ಹೇಗೆ ಪಂಚಾಯಿತಿಗಳಿಗೆ ಹೆಚ್ಚು ಹೆಚ್ಚು ಜವಾಬ್ದಾರಿಗಳನು ವಹಿಸುವುದ

ರಿಂದ ಸರ್ಕಾರಕ್ಕೂ ಕೆಲಸ ಹಗುರವಾಗುತ್ತದೆ. ನಿಜವಾದ ಪ್ರಜಾರಾಜ್ಯವಾಗಿ ಮೈಸೂರು ರಾಜ್ಯ ಬೆಳೆಯಬೇಕೆಂದಿರುವಾಗ ಹೆಚ್ಚು ಹೆಚ್ಚು ಅಭಿವೃದ್ಧಿ ಯೋಜನೆಗಳನ್ನು ಪಂಚಾಯಿತಿಗಳಿಗೆ ವಹಿಸಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಪಂಚಾಯಿತಿಗಳಿಗೆ ಖಾಯಂ ಕಾರ್ಯದರ್ಶಿಗಳನ್ನು ನೇಮಕ ಮಾಡಿಲ್ಲವೆಂದು ಈ ಮಾನ್ಯ ಸಭೆಯಲ್ಲಿ ಅನೇಕ ಸಾರಿ ಸದಸ್ಯರು ಹೇಳಿದ್ದಾರೆ. ಈ ವಿಷಯದಲ್ಲಿ ಹಿಂದೆ ಸಚಿವರು ಭರವಸೆ ಕೊಟ್ಟಿದ್ದಾರೆ. ವಂಶ ಪಾರಂಪರ್ಯವಾಗಿ ಬಂದ ಗ್ರಾಮಾಧಿಕಾರಿಗಳನ್ನು ರದ್ದುಮಾಡಿದಮೇಲೆ, ಅಲ್ಲಲ್ಲಿರತಕ್ಕ ಗ್ರಾಮಾಧಿಕಾರಿಗಳಲ್ಲಿ ಯೋಗ್ಯರೂ ಅರ್ಹರೂ ಇದ್ದರೆ ಅವರನ್ನು ನೇಮಕ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನಾದರೂ ತೀವ್ರವಾಗಿ ಖಾಯಂ ಕಾರ್ಯದರ್ಶಿಗಳನ್ನು ನೇಮಕ ಮಾಡಿ ಪಂಚಾಯಿತಿಗಳ ಕೆಲಸ ಸರಿಯಾಗಿ ನಡೆಯುವಂತೆ ಮಾಡಿ, ನಿಜವಾಗಿಯೂ ರಾಮರಾಜ್ಯದಂತೆ ಕೆಲಸ ಮಾಡಲು ಪ್ರೋತ್ಸಾಹ ಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಹಿಂದಿನ ವರ್ಷ ಅತಿವೃಷ್ಟಿ ಅನಾವೃಷ್ಟಿಯಿಂದ ದೇಶದಲ್ಲಿ ಅನೇಕ ತೊಂದರೆಗಳುಂಟಾಗಿವೆ. ಸರ್ಕಾರದವರು ಶಾಶ್ವತ ಹಾಗೂ ತಾತ್ಕಾಲಿಕ ಪರಿಹಾರಗಳನ್ನೊದಗಿಸಿದ್ದಾರೆ. Famine Relief Fund, Flood Relief Fund ಎಂದು ಪ್ರತ್ಯೇಕ ನಿಧಿಯನ್ನು ಸಂಗ್ರಹ ಮಾಡಿ ದೇಶದಾದ್ಯಂತ ಖಾಯಂ ಪರಿಹಾರಗಳಿಗೆ ಅದರಿಂದ ಹಣವನ್ನು ಖರ್ಚು ಮಾಡಿ, ಮುಂದೆ ಇಂತಹ ಅನಾನುಕೂಲವಾಗದಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಬಾವಿಗಳ ವಿಷಯವನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಈ ಬಗ್ಗೆ ಬಹಳ ಸಹಾಯ ಮಾಡಿದ್ದಾರೆ. 15 ಸಾವಿರಕ್ಕೆ ಮೇಲ್ಪಟ್ಟು ಬಾವಿಗಳನ್ನು ತೋಡಿಸಿದ್ದಾರೆ. ನಮಗೆ ಗೊತ್ತಿರುವಂತೆ ಕೇಂದ್ರ ಸರ್ಕಾರದವರು ಮುಂದೆ ಹಣವನ್ನು ಕೊಡುವುದಿಲ್ಲ. ಹೀಗೆ ಅವರು ಕೊಡುವುದಿಲ್ಲವೆಂದು ರಾಜ್ಯಸರ್ಕಾರದವರು ಬಾವಿಗಳಿಗೆ ಕೊಡತಕ್ಕ ಹಣನನ್ನು ನಿಲ್ಲಿಸಬಾರದು. ರಾಜ್ಯಸರ್ಕಾರದವರು ಕಡಮೆ ಬಡ್ಡಿಯಿಂದ ಹೇರಳವಾಗಿ ಜನರಿಗೆ ಸಾಲ ಕೊಟ್ಟು, ಪ್ರಾರಂಭಿಸಿರುವ ಬಾವಿಗಳ ಕೆಲಸಗಳನ್ನು ಮುಗಿಸಲು ಪ್ರೋತ್ಸಾಹ ಕೊಡಬೇಕು.

ಇನ್ನೂ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೆ. ಆದರೂ ಅಧ್ಯಕ್ಷರು ಗಂಟೆ ಬಾರಿಸಿದುದರಿಂದ ನನಗೆ ಇಷ್ಟು ಅವಕಾಶ ಕೊಟ್ಟುದುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

11-00 A.M.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈ ವಂದನಾರ್ಪಣೆ ನಿರ್ಣಯವನ್ನು ಶ್ರೀ ವೀರಪ್ಪನವರು ಮಂಡಿಸುತ್ತಾ ರಾಜ್ಯಪಾಲರ ಭಾಷಣದಲ್ಲಿರತಕ್ಕ ಅಂಶಗಳನ್ನು ಮತ್ತು ಸರ್ಕಾರ ಸಾಧನೆ ಮಾಡಿರುವುದನ್ನು ಒಂದು ಸುಂದರವಾದ ಚಿತ್ರದಂತೆ ತಿಳಿಸಿದ್ದಾರೆ. ಆದರೆ ಆ ಭಾಷಣದಲ್ಲಿ ಸುಖೀರಾಜ್ಯ ಎಂದು ಕರೆಯಬೇಕಾದರೆ ಏನೇನು ಅನುಕೂಲತೆಗಳನ್ನೊದಗಿಸಿದ್ದಾರೆ ಎಂಬ ವಿಚಾರವೇ ಇಲ್ಲ. ದೇಶದ ಜನರಲ್ಲಿರುವ ವರಮಾನ ಮತ್ತು ಸಂಪತ್ತುಗಳ ಅಸಮಾನತೆ ಎಷ್ಟುಮಟ್ಟಿಗೆ ಕಡಮೆ ಮಾಡಲಾಗಿದೆ ಎಂಬುದನ್ನು ಕೂಡ ಹೇಳಿಲ್ಲ. ಬಡವರು ಕಡುಬಡವರಾಗುತ್ತಿದ್ದಾರೆ, ಐಶ್ವರ್ಯವಂತರು ಇನ್ನೂ ಅನುಕೂಲಸ್ಥರಾಗುತ್ತಿದ್ದಾರೆ. ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶ ಸಾಲದು. ನಿನ್ನೆಯ ದಿವಸ ಕೂಡ ಶ್ರೀ ಕೃಷ್ಣಮೆನನ್‌ರವರು ದೇಶದ ಶೇಕಡ 50 ಜನರಿಗಾದರೂ ಬೇರೆ ಸರಿಯಾದ ಉದ್ಯೋಗ ಕಲ್ಪಿಸಿ ದೇಶದ ಉತ್ಪತ್ತಿ ಹೆಚ್ಚಿಸುವವರೆಗೆ ದೇಶ ಮುಂದುವರಿಯುವುದಿಲ್ಲ ಎಂದು ಹೇಳಿದ್ದಾರೆ. ಅಂಕಿ ಸಂಖ್ಯೆಗಳನ್ನೊದಗಿಸಿಲ್ಲ. ನಮ್ಮ ಮಾದರಿ ದೇಶದ ಸ್ಥಿತಿ ಹೀಗಿದೆ! ವೃದ್ಧರಿಗೆ, ಅಂಗವಿಹೀನರಿಗೆ ಭಿಕಾರಿಗಳಿಗೆ ಮಾಸಾಶನ ದೊರೆಯುವಂತೆ ಏರ್ಪಾಡು ಮಾಡಬೇಕಾದ್ದು ಆವಶ್ಯಕ. ಇತರ ರಾಷ್ಟ್ರಗಳಲ್ಲಿ ಈ ವಿಚಾರದಲ್ಲಿ ಮುಂದುವರೆಯುತ್ತಿದ್ದಾರೆ. ಅವರನ್ನು ನೋಡಿ ಮೈಸೂರಿನಲ್ಲಿ ಮಾಡಿದರೆ ಶುದ್ಧ ನಾಚಿಕೆಗೇಡು, ನಗೆಪಾಟಲು. ನಮ್ಮ ದೇಶದಲ್ಲಿರುವ ಸ್ಥಿತಿಗತಿಗಳಿಗನುಸಾರವಾಗಿ ಒಂದು ವ್ಯವಸ್ಥೆ ಮಾಡುವುದಕ್ಕೆ ಬದಲಾಗಿ ಕೇರಳ ಅಥವಾ ಮದ್ರಾಸಿನಲ್ಲಿ ಮಾಡಿರುವುದನ್ನು ನೋಡಿ, ಅದರ ಸಾಧಕಬಾಧಕಗಳನ್ನು ವಿಚಾರ ಮಾಡಿ ಒಂದು ರೀತಿ ಮಾಡುತ್ತೇವೆಂದು ಹೇಳುವುದು ತಮ್ಮ ಆಡಳಿತದ ಒಂದು ಅವಿವೇಕತನವನ್ನು ತೋರಿಸುತ್ತದೆ. ಅಷ್ಟೇ ಅಲ್ಲ, ಕೆಲಸಕಾರ್ಯಗಳನ್ನು ಒಂದು ನಿರ್ದಿಷ್ಟ ಕಾಲದಲ್ಲಿ ಮಾಡುತ್ತೇವೆಂದು ಹೇಳಿ ಆ ರೀತಿ ಮಾಡಿಲ್ಲ. ಶರಾವತಿ ಯೋಜನೆ ಉದಾಹರಣೆಗೆ ತೆಗೆದುಕೊಂಡರೆ ಕಾರ್ಯದಕ್ಷತೆ ಎಷ್ಟು ಕುಂಠಿತವಾಗಿದೆ ಎಂಬುದನ್ನು ಹೇಳಬಹುದು. ಈ ಸಂಬಂಧವಾಗಿ ಬೇಕಾದಷ್ಟು ಹೇಳಿದ್ದೇವೆ. ಇದರ ವಿಚಾರದಲ್ಲಿ ಶ್ರೀ ಚನ್ನಬಸಪ್ಪನವರು ಒಂದು ದೊಡ್ಡ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ನಮ್ಮ ದೇಶದಲ್ಲಿ ಮೊದಲಿನಿಂದಲೂ ಕೂಡ ದೊಡ್ಡ ದೊಡ್ಡ ಕಾಂಗಾರಿಗಳನ್ನೆಲ್ಲಾ ಸರ್ಕಾರದಿಂದಲೇ ಮಾಡಿಸುತ್ತಿದ್ದರು. ಜೋಗ್‌ಫಾಲ್ಸ್, ಶಿವನಸಮುದ್ರ, ಕನ್ನಂಬಾಡಿ ಮುಂತಾದವುಗಳ ಕೆಲಸವನ್ನೆಲ್ಲಾ ಸರಕಾರವೇ ಮಾಡಿದೆ ಎಂಬುದನ್ನು ಒಪ್ಪಿದ್ದಾರೆ. ಈಚೆಗೆ ಟೈಂ ಫ್ಯಾಕ್ಟರ್ ಮುಖ್ಯ, ಮೂರು ವರ್ಷಗಳಲ್ಲಿ ಶರಾವತಿ ಕೆಲಸವನ್ನು ಮಾಡುತ್ತೇವೆ ಎಂದು 1959ನೆಯ ಇಸವಿ ಡಿಸೆಂಬರಿನಲ್ಲೇ ಹೇಳಿದ್ದರು. ಅದಕ್ಕಾಗಿ ದರವನ್ನು ಹೆಚ್ಚಿಸಿದ್ದಾರೆ, 22 ಕೋಟಿ 97 ಲಕ್ಷ ರೂಪಾಯಿಗಳ ಅಂದಾಜಿದ್ದುದು 30 ಕೋಟಿಗೆ ಏರಿದೆ. ಇದಕ್ಕೆ ಕಾರಣ ಟೈಂ ಫ್ಯಾಕ್ಟರ್ ಎಂದು ಹೇಳಿದ್ದಾರೆ. ಮೂರು ವರ್ಷಗಳಲ್ಲಿ ಮುಗಿಸುತ್ತೇವೆ, ಸರ್ಕಾರದಿಂದ ಮಾಡಿಸಿದರೆ ಜಾಗ್ರತೆ ಆಗುವುದಿಲ್ಲ ಎಂದು ಹೇಳಿದ್ದರು. ಸರ್ಕಾರದಲ್ಲಿ ಅನುಭವವಿರುವ ನೂರಾರು ಇಂಜಿನಿಯರುಗಳಿದ್ದಾರೆ. ಅವರ ಅನುಭವದ ಉಪಯೋಗ ಪಡೆಯಲು ಅವಕಾಶ ಕೊಡದೆ ಹೊರಗಿನವರಿಗೆ ನಮ್ಮ ಕೋಟಿಗಟ್ಟಲೆ ಹಣ ಹೋಗಲು ಅವಕಾಶ ಮಾಡಿದ್ದಾರೆ. ಹೋದ ಸಲ ರಾಜ್ಯಪಾಲರ ಭಾಷಣದಲ್ಲಿ 1962ನೆಯ ಇಸವಿ ಡಿಸೆಂಬರಿನೊಳಗಾಗಿ ಮುಗಿಸುವುದಾಗಿ ಹೇಳಿದ್ದ ಕೆಲಸವನ್ನು ಈಗ 1963ನೇ ಡಿಸೆಂಬರಿನೊಳಗೆ ಮಾಡುವುದಾಗಿ ಹೇಳಿದ್ದಾರೆ. ಹೀಗೆ ಒಂದು ವರ್ಷ ಮುಂದುವರಿಸುವುದಾದರೆ ಹೆಚ್ಚು ಹಣ ಕೊಟ್ಟು ಪ್ರಯೋಜನ ವೇನು ? ಇದಕ್ಕೆ ಜವಾಬ್ದಾರರು ಯಾರು ? ದೇಶದ ಹಣ ಹೆಚ್ಚಾಗಿ ಖರ್ಚಾಗಿರುವುದರ ಜೊತೆಗೆ ಅನಾನುಕೂಲ ಬೇರೆ 125 ರೂಪಾಯಿಗಳ ದರವಿದ್ದುದಕ್ಕೆ 175 ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೀಗೆ ಶೇಕಡ 40ರಷ್ಟು ಜಾಸ್ತಿ ಕೊಟ್ಟಿರುವುದಕ್ಕೆ ಯಾರು ಜವಾಬ್ದಾರರೆಂಬುದನ್ನು ವಿಮರ್ಶೆ ಮಾಡಬೇಕು. ಇದಕ್ಕಾಗಿ ಒಂದು ಸಮಿತಿ ನೇಮಕ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

(ಶ್ರೀ ಬಿ. ಹುಚ್ಚೇಗೌಡ)

ಪಂಚಾಯಿತಿ ರಾಜ್ಯ ಸ್ಥಾಪಿಸಿರುವುದಾಗಿ ಹೇಳಿರುವುದು ಕೇವಲ ಪ್ರಚಾರ. ಅದನ್ನು ಹೊಸದಾಗಿ ಮೈಸೂರಿನಲ್ಲಿ ಮಾಡಬೇಕಾಗಿಲ್ಲ. ಅದು ಮೈಸೂರು ಸಂಸ್ಥಾನದಲ್ಲಿ 1926ರಿಂದಲೂ ಇತ್ತು. ಜಿಲ್ಲಾ ಬೋರ್ಡಿನಲ್ಲಿ ನಾನ್-ಅಫಿಷಿಯಲ್ ಪ್ರೆಸಿಡೆಂಟರಿದ್ದರು. ಇದನ್ನು ಕುಂಠಿತಗೊಳಿಸಿದ್ದಾರೆ. ಅಧಿಕಾರ ವಿಕೇಂದ್ರೀಕರಣವಾಗುವುದಕ್ಕೆ ಬದಲಾಗಿ ಕೇಂದ್ರೀಕರಣವಾಗಿದೆ. ಡೆಪ್ಯುಟಿ ಕಮಿಷನರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರ ಮೂಲಕ ಎಲ್ಲಾ ಕೆಲಸಗಳು ಆಗುತ್ತಿವೆ. ಉಳಿದವರು ಹೆಸರಿಗೆ ಮಾತ್ರ ಇದ್ದಾರೆ.

ಇನ್ನು ಆಹಾರ ಸಮಸ್ಯೆಯ ವಿಚಾರವನ್ನು ನೋಡೋಣ. ರೈತರಿಗೆ ಸಮಾಜದಲ್ಲಿ ನ್ಯಾಯವಾಗಿ ದೊರೆಯಬೇಕಾದ ಸ್ಥಾನ ದೊರೆತಿಲ್ಲ. ರೈತರು ಮನೆಯ ಹತ್ತಿರವೇ ಇದ್ದುಕೊಂಡು ಪರಮಾವಧಿ ಉತ್ಪತ್ತಿ ಪಡೆಯಬೇಕೆಂದು ಈ ಧಿವಸಪ್ಯಾಕೇಜ್ ಸ್ಕೀಂ ಜಾರಿಗೆ ತಂದಿದ್ದಾರೆ. ಆದರೆ ಅದಕ್ಕೆ ತಕ್ಕ ಸೌಕರ್ಯ ಒದಗಿಸುತ್ತಿಲ್ಲ. ರೈತರು ತಮಗೆ ದೊರೆಯಲಿರುವ ಸಹಾಯಕ್ಕೆ ಅರ್ಜಿ ಹಾಕಿದರೆ ಅದು ಸಿಕ್ಕಬೇಕಾದರೆ ಒಂದು ವರ್ಷವಾಗುತ್ತದೆ. ಗೊಬ್ಬರ ಸರಬರಾಯಿ ಮಾಡುವ ಹೊತ್ತಿಗೆ ಕಾಲ ಮೀರಿಹೋಗಿರುತ್ತದೆ. ಗುಳ, ಒತ್ತನೆ ಬೀಜ ಮುಂತಾದ್ದು ಯಾವುದೂ ಕೂಡ ಸಕಾಲದಲ್ಲಿ ದೊರೆಯುವುದಿಲ್ಲ. ನೌಕರರ ಸಂಖ್ಯೆ ಮಾತ್ರ ಬೆಳೆಯುತ್ತಿದೆ. ಹೆಜ್ಜೆಗೊಬ್ಬ ನೌಕರ ಇದ್ದಾನೆ. ಈ ಬಗ್ಗೆ ನಾವು ವಿರೋಧ ಸೂಚಿಸಿದರೂ ಬೇಕಾದಷ್ಟು ಡೆಪ್ಯುಟಿ ಕಮಿಷನರುಗಳನ್ನು ಮತ್ತು ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಕ ಮಾಡಿದ್ದಾರೆ. ಜಿಲ್ಲೆಗಳ ಸಂಖ್ಯೆ ಮತ್ತು ಡೆಪ್ಯುಟಿ ಕಮಿಷನರ ಸಂಖ್ಯೆ ಕಡಮೆ ಮಾಡಬೇಕೆಂದು ಹೇಳುತ್ತಿರುವಾಗ ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮಿಷನರನ್ನು ನೇಮಿಸುತ್ತಿದ್ದಾರೆ. ಬೇಕಾದಷ್ಟು ಡೆಪ್ಯುಟಿ ಡೈರೆಕ್ಟರುಗಳನ್ನು ವ್ಯವಸಾಯ ಇಲಾಖೆಯಲ್ಲಿ ನೇಮಿಸುತ್ತಿದ್ದಾರೆ. ಇದು ಬ್ಯೂರೋಕ್ರೆಟಿಕ್ ಮೆಥಡ್ ಜ್ಞಾಪಕಕ್ಕೆ ತರುತ್ತಿದೆ. ರೈತರಿಗೆ ಸಾಕಷ್ಟು ಅನುಕೂಲ ಮಾತ್ರ ಆಗುತ್ತಿಲ್ಲ. ಜೀಪುಗಳಿಗೆ, ಸಂಬಳ ಸಾರಿಗೆ ಮುಂತಾದುವಕ್ಕೆ ಬೇಕಾದಷ್ಟು ಹಣ ಖರ್ಚಾಗುತ್ತಿದೆ. ಸಕಾಲದಲ್ಲಿ ರೈತರಿಗೆ ಹಣ ಮತ್ತು ಇತರ ಸಹಾಯಗಳನ್ನು ನೀಡಿದ್ದರೆ ಈಗ ಬರುತ್ತಿರುವುದರ ನಾಲ್ಕರಷ್ಟು ಉತ್ಪತ್ತಿ ಬರುತ್ತಿತ್ತು.

ಸಹಕಾರ ಸಂಘದ ವಿಚಾರವನ್ನು ಶ್ರೀ ರಾಮೇಗೌಡರು ಹೇಳಿದ್ದಾರೆ. ಈ ಸಂಘಗಳಲ್ಲಿ ಡಿಫಾಲ್ಟರುಗಳನ್ನು ನಾಮಿನೇಟ್ ಮಾಡುತ್ತಾರೆ. ಹಣ ದುರ್ವಿನಿಯೋಗವಾಗುತ್ತಿದೆ. ಲೆಕ್ಕಗಳು ಆಡಿಟ್ ಆಗುತ್ತಿಲ್ಲ. ಹೀಗಾಗಿ ರೈತರ ಮನೆಗಳು ಹಾಳಾಗುತ್ತಿವೆ. ನೂರಾರು ಕೇಸುಗಳು ನಮ್ಮ ಜಿಲ್ಲೆಯಲ್ಲಿವೆ. ಎಷ್ಟೋ ಸೊಸೈಟಿಗಳು ಲಿಕ್ವಿಡೇಷನ್‌ಗೆ ಹೋಗುವ ಸ್ಥಿತಿಯಲ್ಲಿವೆ. ಆದರೂ ಕೂಡ ಸರ್ಕಾರ ಆಡಿಟ್ ಮಾಡಿಸಿ ಸೂಕ್ತಕ್ರಮ ಕೈಗೊಂಡಿಲ್ಲ.

ಈಗ ಮೆಟ್ರಿಕ್ ಸಿಸ್ಟಂ ಜಾರಿಗೆ ಬರುತ್ತಿದೆ. ಹಿಂದೆ ರಸ್ತೆಗಳಲ್ಲಿ ಲೋಕೋಪಯೋಗಿ ಶಾಖೆಯವರು ಒಂದು ರೀತಿ ಮೈಲಿ ಕಲ್ಲುಗಳನ್ನು ಹಾಕಿಸಿದ್ದರು. ಈಗ ಈ ವಿಚಾರದಲ್ಲಿ ಬದಲಾವಣೆಯಾಗುವುದರಿಂದ ಒಂದೊಂದು ಕಲ್ಲಿಗೆ 15-20 ರೂಪಾಯಿಗಳನ್ನು ಕೊಡಬೇಕಾಗಿದೆ. ಹೊಸ ರಸ್ತೆಗಳಿಗೆಲ್ಲ ಮೆಟ್ರಿಕ್ ಸಿಸ್ಟಂನಂತೆ ಕಲ್ಲುಗಳನ್ನು ನೆಡೆಸಬೇಕು.

ಶರಾವತಿ ಯೋಜನೆಯ ಪ್ರಕಾರ ಮುಳುಗಡೆಯಾಗುವ ಪ್ರದೇಶದಲ್ಲಿ ಸೇತುವೆ ಕಟ್ಟುತ್ತಾ ಇದ್ದಾರೆ. ಇದನ್ನು ಆಡಿಟ್ ವರದಿಯಲ್ಲಿ ತಿಳಿಸಿದ್ದಾರೆ. ಇದನ್ನು ನೋಡಿ ಸರ್ಕಾರದಲ್ಲಿ ದಕ್ಷತೆ ಇದೆಯೇ ಎಂದು ಕೇಳಬೇಕಾಗಿದೆ. ಆಡಿಟ್ ಅಬ್ಜೆಕ್ಷನ್ನಿಗೆ ಬೆಲೆ ಕೊಡದೆ ಇರುವವರು ಎಷ್ಟರ ಮಟ್ಟಿಗೆ ಸರ್ಕಾರದ ಆಡಳಿತವನ್ನು ನಡೆಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈಗ ಅವರು ಹೇಳಿದ್ದರಲ್ಲಿ ಯಾವುದಾದರೂ ಒಂದರಲ್ಲಿಯಾದರೂ ದಕ್ಷತೆ ಇದೆಯೆ ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಕಂಪಲ್ಸರಿ ವಿದ್ಯಾಭ್ಯಾಸದ ವಿಚಾರದಲ್ಲಿ ಮಾನ್ಯ ವಿದ್ಯಾಮಂತ್ರಿಗಳು ಹೇಳಿದರು, ಬರೀ ಸ್ಕೂಲ್‌ಬಿಲ್ಡಿಂಗ್‌ಗೋಸ್ಕರ ಮೂರು ಕೋಟಿ ರೂಪಾಯಿಗಳು ಖರ್ಚಾಗುತ್ತವೆಯೆಂದು.

ಶ್ರೀ ಎಸ್. ಆರ್. ಕಂಠಿ.—ಮೂರು ಕೋಟಿ ರೂಪಾಯಿಗಳಲ್ಲ. ಮುವ್ವತ್ತು ಕೋಟಿ ರೂಪಾಯಿಗಳು ಬೇಕಾಗುತ್ತವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಈ ರಿಪೋರ್ಟಿನಲ್ಲಿ ಕೊಟ್ಟಿರತಕ್ಕದ್ದು ಸ್ವಲ್ಪ ವ್ಯತ್ಯಾಸವಾಗಿದೆ ಎಂದು ಕಾಣುತ್ತದೆ. ಇವರು ದೇಶದಲ್ಲಿ ಮಾಡಿರತಕ್ಕ ಕೆಲಸಕಾರ್ಯಗಳಲ್ಲಿ ಯಾವುದು ಅಭಿನಂದನೀಯ ಎಂದು ಹೇಳುವುದಕ್ಕಾಗುವುದಿಲ್ಲ.

ಇನ್ನು ಕೊನೆಯದಾಗಿ ರೋಡ್ ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಹೇಳುವುದಾದರೆ 1961ನೇ ಇಸವಿ ಅಕ್ಟೋಬರ್ ತಿಂಗಳವರೆಗೆ ಹಾಸನ ಜಿಲ್ಲೆ ಸೇರಿ 5,375 ಮೈಲಿ ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಜ್ ಮಾಡಿದ್ದಾರೆ. ಮೊದಲು ತಿಪಟೂರಿನಿಂದ ಚನ್ನರಾಯಪಟ್ಟಣಕ್ಕೆ ಎಂಟು ಬಸ್ಸುಗಳನ್ನು ಓಡಿಸುತ್ತಿದ್ದರು. ಈಗ ಐದು ಬಸ್ಸುಗಳನ್ನು ಮಾತ್ರ ಓಡಿಸುತ್ತಿದ್ದಾರೆ. ಬಸ್ ನಿಲ್ದಾಣಗಳಲ್ಲಿ ಸಹ ಬಸ್ ನಿಲ್ಲಿಸುವುದಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಜ್ ಆದ ಮೇಲೆ ಜನಗಳಿಗೆ ಸೌಕರ್ಯ ಸಿಕ್ಕುತ್ತದೆ, ಸರ್ಕಾರದವರು ಎಷ್ಟು ಬಸ್ಸುಗಳನ್ನ ಬೇಕಾದರೂ ಓಡಿಸುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಮೊದಲು ತಿಪಟೂರಿನಿಂದ ಚನ್ನರಾಯಪಟ್ಟಣಕ್ಕೆ ಎಂಟು ಬಸ್ಸುಗಳನ್ನು ಓಡಿಸುತ್ತಿದ್ದಾಗ ಅವು ಸಾಲುವುದಿಲ್ಲ ಎಂದು ಜನಗಳು ಹೇಳುತ್ತಿದ್ದರು. ಆದರೆ ಈಗ ಐದು ಬಸ್ಸುಗಳನ್ನು ಮಾತ್ರ ಓಡಿಸುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ ಪ್ರಯಾಣಿಕರು ಬಸ್ ಸ್ಟ್ಯಾಂಡಿಗೆ ಬೆಳಗ್ಗೆ ಏಳು ಗಂಟೆಗೆ ಬಂದು ಸಾಯಂಕಾಲ ಏಳು ಗಂಟೆಯವರೆಗೆ ಕುಳಿತರೂ ಅವರಿಗೆ ಬಸ್ಸು ಸಿಕ್ಕುವುದಿಲ್ಲ. ಹೆಂಗಸರು ಮತ್ತು ಮಕ್ಕಳ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಬಿಸಿಲಿನಲ್ಲಿ ತಿಂಡಿಯಿಲ್ಲದೆ ಬೆಳಗಿನಿಂದ ಸಾಯಂಕಾಲದವರೆಗೂ ತೊಂದರೆಪಡುತ್ತಿದ್ದಾರೆ. ಇಂಥಾ ಅವ್ಯವಸ್ಥೆ ಅಲ್ಲಿ ಆಗುತ್ತಿದೆ. ದಿನವಹಿ ಇದೇ ರೀತಿ ಆಗುತ್ತಿದೆ. ಈ ಕಷ್ಟಗಳನ್ನು ಯಾರಲ್ಲಿ ಹೇಳಿಕೊಳ್ಳಬೇಕೋ ನನಗಂತೂ ಅರ್ಥವಾಗುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಪ್ರಸ್ತಾಪಗಳಿಗೆ ಅಭಿನಂದಿಸುವ ಶ್ರೀ ಗಾಂಜಿವೀರಪ್ಪನವರ ಸೂಚನೆ ಏನಿದೆ ಅದನ್ನು ನಾನು ವಿರೋಧಿಸುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಎರಡು ಮೂರು ನಿಮಿಷಗಳ ಕಾಲಾವಕಾಶವನ್ನು ಮಾತ್ರ ಕೊಟ್ಟ

ದ್ದಾರೆ. ಆದ್ದರಿಂದ ಈಗ ನಾನು ಹೇಳುವಂಥಾ ವಿವರಣೆಗಳನ್ನು Definitions ಸಮರ್ಥನೆ ಮಾಡಲು ಬಜೆಟ್ ಅಧಿವೇಶನದಲ್ಲಿ ಅವಕಾಶವನ್ನು ತೆಗೆದುಕೊಳ್ಳುತ್ತೇನೆ. ಸರಕಾರದ ಆಹಾರ ಧೋರಣೆ (Food Programme) ಹೇಗಿದೆ ಎಂದರೆ ಹೊಟ್ಟೆಗೆ ಹಿಟ್ಟಿಲ್ಲದ ಬಡ ಬೋರೇಗೌಡನಿಗೆ 30 ಮೊಳ ಜರೀ ಶಾಲನ್ನು ಕೊಡುತ್ತೇವೆಂದು ಹೇಳಿದ ಹಾಗೆ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದರೆ ಸರ್ಕಾರದ ಹಣ ಸುಲಿಗೆ ಮಾಡುವ ಖಾತೆ Department to plunder wealth of the Government.

ಇನ್ನು ಸರ್ಕಾರ ನೇಮಿಸುವ ಬೇರೆ ಬೇರೆ ಬೋರ್ಡುಗಳು ಉದಾಹರಣೆಗಾಗಿ ಖಾದಿ ವಿಲೇಜ್ ಇಂಡಸ್ಟ್ರೀಸ್ ಬೋರ್ಡು, ಕಾಯರ್ ಬೋರ್ಡ್, ಫಿಷರೀಸ್ ಬೋರ್ಡು ಇವುಗಳಲ್ಲಿ ಹೆಚ್ಚಿನ ಮಾನ್ಯತೆ ಯಾರಿಗೆಂದರೆ, ಖಾದಿ ಟೋಪಿಯನ್ನು ಇಟ್ಟುಕೊಂಡು ಮಹಾತ್ಮ ಗಾಂಧೀಜಿಯವರ ಹೆಸರನ್ನು ಹೇಳತಕ್ಕ ಕಾಂಗ್ರೆಸ್ಸಿನವರಿಗೆ ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣವನ್ನು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮವೆಂಬ ಹೆಸರಿನಲ್ಲಿ ಸೆಳೆಯುವುದಕ್ಕೆ ಕಾಂಗ್ರೆಸ್ಸಿನವರಿಗೆ ಇದು ಒಂದು ಮಾರ್ಗ; ಮತ್ತು ಮಂತ್ರಿ ಮಂಡಲದಲ್ಲಿ ಸ್ಥಾನವನ್ನು ಅಪೇಕ್ಷಿಸುವ ಕೆಲವು ನಾಯಕರಿಗೆ ಯಾವುದಾದರೂ ಒಂದು ಬೋರ್ಡಿನಲ್ಲಿ ಅಧ್ಯಕ್ಷ ಸ್ಥಾನವನ್ನು ಕೊಟ್ಟು ಸುಮ್ಮನೆ ಕೂರಿಸುವ ಒಂದು ಉಪಾಯ ಕೂಡ.

ಆಮೇಲೆ ಪಟೇಲ್ ಮತ್ತು ಶ್ಯಾನುಭೋಗರ ಹಕ್ಕನ್ನು ರದ್ದು ಮಾಡುವ ಯೋಜನೆ ವಿಚಾರದಲ್ಲಿ ಹೇಳುವುದಾದರೆ ತುಳುವಿನಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ, ಅದೇನೆಂದರೆ "ಕುದುರೆ ಕೊಳ್ಳುವ ಮೊದಲೇ ಹುರುಳಿಯನ್ನು ತಗೆದುಕೊಂಡು ಇಡುವುದು ಎಂದು." ಸರಿಯಾದ ವ್ಯವಸ್ಥೆಯನ್ನು ಮಾಡದೆ ವಂಶ ಪಾರಂಪರ್ಯವಾಗಿ ಬಹಳ ಯೋಗ್ಯ ರೀತಿಯಾಗಿ ಸುಶಿಕ್ಷಿತವಾಗಿ ನಡೆದುಕೊಂಡು ಬಂದ ಪದ್ಧತಿಯನ್ನು ರದ್ದು ಮಾಡುವ ಈ ಕಾರ್ಯಕ್ರಮ ಖಂಡಿತ ಯಶಸ್ವಿಯಾಗಲಾರದು.

ಇನ್ನು ಸರ್ಕಾರದ ಶಿಕ್ಷಣ ಪದ್ಧತಿ ಹೇಗಿದೆಯೆಂದರೆ ಮಂತ್ರಿ ಮಂಡಲ ಬದಲಾವಣೆ ಆದಹಾಗೆ ಇದೂ ಬದಲಾವಣೆಯಾಗುತ್ತಿದೆ. ಜೈಲು ಒಳಗಡೆ ಇರುವ ಶಿಕ್ಷಣ ಧೋರಣೆ ಯಾವ ರೀತಿ ಇದೆಯೋ ಆ ರೀತಿ ನಮ್ಮ ಸರ್ಕಾರ ವಿಧ್ಯಾರ್ಥಿಗಳಿಗೆ ಕೊಡುವ ಶಿಕ್ಷಣ ಧೋರಣೆ ಇದೆ. ಸರ್ಕಾರದ ಆರ್ಥಿಕ ಧೋರಣೆ ಏನಿದೆ ಎಂಬುದಕ್ಕೆ ಒಂದ ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದ ಸಂಸತ್ತಿನ ಸಭೆಯಲ್ಲಿ ಒಬ್ಬ ಮಾನ್ಯ ಸದಸ್ಯರು ಒಬ್ಬ ಮುದುಕನ ಕಥೆಯನ್ನು ಹೇಳಿದಹಾಗೆ ಇದೆ. ಅದೇನೆಂದರೆ ಒಬ್ಬ ಮುದುಕ, ಮನೆಯ ಯಜಮಾನ ತನ್ನ ಮನೆಯಲ್ಲಿ ಚಿಮಿಣಿ ಎಣ್ಣೆಯ ಖರ್ಚನ್ನು ಕಡಮೆ ಮಾಡುವ ಸಲುವಾಗಿ ತನ್ನ ಮಕ್ಕಳು, ಅಳಿಯಂದಿರು, ಸೊಸೆ ಇವರುಗಳನ್ನೆಲ್ಲಾ ಬೇಗ ಮಲಗಿಕೊಳ್ಳುವಂತೆ ಹೇಳಿದ. ಮುಂದೆ ಒಂದು ವರ್ಷದನಂತರ ಅದರ ಪರಿಣಾಮ ವೇನಾಯಿತು ಎಂದರೆ ಮನೆ ತುಂಬಾ ಮಕ್ಕಳು, ಮೊಮ್ಮಕ್ಕಳು ಹುಟ್ಟಿ ಸಂಸಾರದ ಖರ್ಚು ಒಂದೇ ಸಮನೆ ತುಂಬಾ ಹೆಚ್ಚಾಯಿತು. ಹಾಗೆ ನಮ್ಮ ಸರ್ಕಾರದ ಆರ್ಥಿಕ ಧೋರಣೆ.

ಶ್ರೀ ವೈ. ರಾಮಚಂದ್ರ (ಚಿಕ್ಕಪೇಟೆ). ಸ್ವಾಮಿ, ರಾಜ್ಯಪಾಲರ ಭಾಷಣದ 17ನೇ ಪ್ಯಾರಾದಲ್ಲಿ ಬೆಂಗಳೂರಿನಲ್ಲಿ ಹಾಲಿನ ಯೋಜನೆಗಾಗಿ 25 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದೆ ಎಂದು ಹೇಳಿದ್ದಾರೆ. ಈ ಬಾಬಿಗೆ ಕೊಟ್ಟಿರುವ ಹಣ ಬಹಳ ಕಡಮೆ. ಬೆಂಗಳೂರಿನಲ್ಲಿ ಹಾಲಿನ ಶ್ರಮ ತಮಗೆಲ್ಲರಿಗೂ ಗೊತ್ತಿದೆ. ಎಲ್ಲರೂ ಹಾಲಿಗೆ ನೀರು ಹಾಕಿದರೆ ಬೆಂಗಳೂರಿನಲ್ಲಿ ನೀರಿಗೆ ಹಾಲನ್ನು ಹಾಕಿ ಮಾರುತ್ತಿದ್ದಾರೆ. ಆದ್ದರಿಂದ ಇಲ್ಲಿ ಹಾಲು ದೊರೆಯುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಈ ಬಗ್ಗೆ 50 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ ಸಹಕಾರ ಸಂಘಗಳ ವಿಚಾರ. ಬೆಂಗಳೂರಿನ ಸೌತ್ ಮತ್ತು ನಾರ್ತ್ ತಾಲ್ಲೂಕು ಸಹಕಾರ ಸಂಘಗಳಲ್ಲಿ ನಾನು ಐದಾರು ವರ್ಷಗಳಿಂದ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಕೆಲವು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇವೆ. ಮೊದಲು ರೆವಿನ್ಯೂ ಆಫೀಸರುಗಳು ಸೊಸೈಟಿಗೆ ಡಿಕ್ರಿ ಆದ ತಕ್ಷಣ ಜಮೀನುಗಳನ್ನು ಸ್ವಾಧಿನಕ್ಕೆ ತೆಗೆದುಕೊಂಡು ಕೊಡುತ್ತಿದ್ದರು. ಈಗ ಈ ಅಧಿಕಾರವನ್ನು ಕೋ-ಆಪರೇಟಿವ್ ಇನ್‌ಸ್ಪೆಕ್ಟರಿಗೆ ಕೊಟ್ಟಿದ್ದಾರೆ. ಆದರೆ ಈ ಕೋ-ಆಪರೇಟಿವ್ ಇನ್‌ಸ್ಪೆಕ್ಟರುಗಳಿಗೆ ರೆವಿನ್ಯೂ ಅಧಿಕಾರಿಗಳಿಗಿರುವ ಅಧಿಕಾರ ಇಲ್ಲ. ಇದರಿಂದ ಜಮೀನುಗಳು ಸೊಸೈಟಿಯ ಸ್ವಾಧೀನಕ್ಕೆ ಕೊಡಲು ತೊಂದರೆಯಾಗಿದೆ. ಸಾಲಗಾರನೇ ಆ ಜಮೀನನ್ನು ಅನುಭವಿಸುತ್ತಾ ಇರುತ್ತಾನೆ. ಈ ಕಾರಣದಿಂದ ಸೊಸೈಟಿ ಮುಳುಗಿ ಹೋಗುವ ಸಂಭವ ಇದೆ. ಸೊಸೈಟಿಗೆ ಬರಬೇಕಾದ ಹಣ ಬರುತ್ತಿಲ್ಲ. ಲ್ಯಾಪ್ಸ್ ಆಗುತ್ತಾ ಇದೆ. ಕೋ ಆಪರೇಟಿವ್ ಸೊಸೈಟಿಗಳಲ್ಲಿ ಏಳೂವರೆ ಪರ್ಸೆಂಟ್ ಇಂಟರೆಸ್ಟ್ ವಸೂಲು ಮಾಡುತ್ತಿದ್ದಾರೆ. ಇದರಿಂದ ಬಡರೈತರಿಗೆ ಅನುಕೂಲವಾಗುವುದಕ್ಕೆ ಬದಲು ಅನಾನುಕೂಲವೇ ಹೆಚ್ಚಾಗುತ್ತಿದೆ. ಸಾಧ್ಯವಾದ ಮಟ್ಟಿಗೆ ಈ ಬಡ್ಡಿ ದರವನ್ನು ಕಡಿಮೆ ಮಾಡಿದರೆ ಈ ಸಹಕಾರ ಸಂಘಗಳ ಉದ್ದೇಶವು ನೆರವೇರಿದಂತಾಗುತ್ತದೆ. ಪ್ರೈಮರಿ ಸೊಸೈಟಿಗಳು ಕೊಟ್ಟಿರತಕ್ಕ ಸಾಲಗಳು ಸಕಾಲಕ್ಕೆ ಬಾರದೇ ಇದ್ದರೆ, ಈ ಲೆಖ್ಖದ ಬಾಬತ್ತಿಗೆ ಕೇಂದ್ರ ಬ್ಯಾಂಕಿನವರು ಈ ಪ್ರೈಮರಿ ಸೊಸೈಟಿಯವರು ಕೊಟ್ಟಿರತಕ್ಕ ಬಡ್ಡಿದರಕ್ಕಿಂತ ಹೆಚ್ಚಿನ ಬಡ್ಡಿಯನ್ನು ಈ ಪ್ರೈಮರಿ ಸೊಸೈಟಿಗಳಿಂದ ವಸೂಲು ಮಾಡುತ್ತಿದ್ದಾರೆ. ಇದರಿಂದ ಪ್ರೈಮರಿ ಸೊಸೈಟಿಗಳಿಗೆ ಬಹಳ ತೊಂದರೆಯಾಗುತ್ತದೆ.

ಹೊಸತೂಕದ ಬಟ್ಟುಗಳನ್ನು ಜಾರಿಗೆ ತಂದಿರುವುದು ಒಳ್ಳೆಯದು. ಆದರೆ ಈಚೆಗೆ ವ್ಯಾಪಾರಸ್ಥರು ಒಂದು ವೀಸೆ ಎಷ್ಟು ಬೆಲೆಗೆ ಮಾರುತ್ತಿದ್ದರೋ ಈಗ ಒಂದು ಕೆ. ಜಿ. ಗೂ ಅದನ್ನೇ ಗೊತ್ತು ಮಾಡಿ ಮಾರುತ್ತಿದ್ದಾರೆ. ಇದರಿಂದ ಜನರಿಗೆ ಬಹಳ ನಷ್ಟವಾಗುತ್ತಿದೆ. ಇದು ಎಲ್ಲರಿಗೂ ತಿಳಿದ ವಿಚಾರವೇ. ಆದರೂ ಸಹ ಅಧಿಕಾರಿಗಳು ಇದರ ಕಡೆಗೆ ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ಹೇಳುತ್ತೇನೆ.

ಗ್ರಾಮಾಂತರ ರಸ್ತೆಗಳನ್ನು ಹೆಚ್ಚು ಹೆಚ್ಚಿಗೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಸಂತೋಷ. ಇದಕ್ಕೆ ಮುಂಚೆ ಸರ್ಕಾರ ವಹಿಸಿಕೊಂಡಿರತಕ್ಕ ಬೆಂಗಳೂರಿನ ಟ್ರಂಕ್ ರಸ್ತೆಗಳ ಗತಿ ನೋಡಲಿ. ಅವುಗಳನ್ನು ಜಾಗ್ರತೆಯಾಗಿ ಸರಿಪಡಿಸಬೇಕು.

ಅರಣ್ಯ ಶಾಖೆಯ ವಿಚಾರ–ಈಚೀಚೆಗೆ ಅನೇಕವಾಗಿ ಅರಣ್ಯ ಶಾಖೆಯವರು ಮರಗಳನ್ನು ಕಡಿಯುತ್ತಿದ್ದಾರೆ. ಆದರೆ ಮರಗಳನ್ನು ನೆಡುವುದು ಮಾತ್ರ ನಿಂತು ಹೋಗಿದೆ. ಹಿಂದೆ ವನಮಹೋತ್ಸವವನ್ನೂ ಸಹ ಮಾಡುತ್ತಿದ್ದರು. ಈಗ ಅದನ್ನು ಕೂಡ ನಿಲ್ಲಿಸಿಬಿಟ್ಟಿದ್ದಾರೆ. ಅದನ್ನು ಮತ್ತೆ ತಕ್ಷಣ ಜಾರಿಗೆ ತರುವುದಕ್ಕೆ ಪ್ರಯತ್ನ ಪಡಬೇಕು. ಏಕೆಂದರೆ ಅರಣ್ಯವೇ

(ಶ್ರೀ ವೈ. ರಾಮಚಂದ್ರ)

ನಮ್ಮ ದೇಶದ ಸಂಪತ್ತು. ಮಳೆ ಮತ್ತು ಬೆಳೆಗೆ ಕಾರಣವಾದುದು.

ಬೆಂಗಳೂರು ನಗರದ ನೀರಿನ ಪೂರೈಕೆಯ ವಿಚಾರ ಹೇಳಿದರು. ಇದಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವುದಾಗಿಯೂ, ಈ ಸಂಬಂಧದಲ್ಲಿ ಬಂದಿರತಕ್ಕ ನಾನಾ ಸ್ಕೀಮುಗಳನ್ನು ಪರಿಶೀಲನೆ ಮಾಡುವುದಾಗಿಯೂ ಹೇಳಿದ್ದಾರೆ. ನಾನು ಬೆಂಗಳೂರು ಸಿಟಿ ಕಾರ್ಪೊರೇಷನ್ ಮೇಯರಾಗಿ ಮೇಕೆದಾಟಿಗೆ ಒಮ್ಮೆ ಭೇಟಿಕೊಟ್ಟಾಗ ಆಗ್ಗೆ ಸ್ಪೀಕರಾಗಿದ್ದ ಶ್ರೀಮಾನ್ ಕಂಠಿಯವರೂ ಸಹ ನಮ್ಮೊಡನೆ ಬಂದು ಸರ್ಕಾರ ಮತ್ತು ಕಾರ್ಪೊರೇಷನ್ ಅಧಿಕಾರಿಗಳು ಮೇಕೆದಾಟಿನಿಂದ ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ತರುವ ಬಗ್ಗೆ ಚರ್ಚೆಮಾಡಿದ್ದನ್ನು ವೀಕ್ಷಿಸಿದ್ದಾರೆ. ಕೊನೆಗೆ ಕಾವೇರಿ ಸ್ಕೀಮೇ ಯೋಗ್ಯವಾದದ್ದೆಂದು ಒಪ್ಪಿಕೊಂಡೆವು. ಅಷ್ಟೆಲ್ಲಾ ಮಾಡಿದ ಮೇಲೆ ಈಗ ಮತ್ತೆ ಹಳ್ಳಿಮಾಲ, ಷಿಂಷಾ ಮತ್ತು ಕಾವೇರಿ ನದಿಗಳಿಂದ ನೀರು ತರುವ ವಿಚಾರವನ್ನು investigation ಮಾಡಬೇಕಾದ್ದೇ ಇರಲಿಲ್ಲ. ಏನೂ ಯೋಚನೆ ಮಾಡದೆ ಕಾವೇರಿ ಸ್ಕೀಮನ್ನು ತೆಗೆದುಕೊಳ್ಳಬೇಕಾಗಿತ್ತೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಈಗ ಮೂರನ್ನೂ investigate ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ವೈ. ರಾಮಚಂದ್ರ.—ನನ್ನ ಅಭಿಪ್ರಾಯದಲ್ಲಿ ನೀವು ಆ ಯೋಚನೆಯನ್ನೇ ಮಾಡಬೇಕಾಗಿರಲಿಲ್ಲ. ನೇರವಾಗಿ ಕಾವೇರಿ ನದಿಯಿಂದಲೇ ನೀರು ತರಲು ಪ್ರಯತ್ನಮಾಡಬೇಕಾಗಿತ್ತು. ಬೆಂಗಳೂರಿಗೆ ಟ್ರಿಪ್ಲಿಕೇಟ್ ಮೇನ್ ಹಾಕಬೇಕೆಂದು ಈಗ ಮೂರು ವರ್ಷಗಳಿಂದಲೂ ಮಾಡುತ್ತಿದ್ದೀರಿ. ಇನ್ನೂ ಪೂರೈಕೆಯಾಗಿಲ್ಲ. ಟ್ರಿಪ್ಲಿಕೇಟ್ ಮೇನ್‌ಗೆ ಮೂರು ವರ್ಷವಾದರೆ ಇನ್ನು ಈ ಸ್ಕೀಮಿಗೆ ಇನ್ನೆಷ್ಟು ವರ್ಷವಾಗಬೇಕೋ ಗೊತ್ತಿಲ್ಲ. ಆದ್ದರಿಂದ ಈ ವಿಷಯದಲ್ಲಿ ತಡಮಾಡದೆ ತಾವು ಕಾವೇರಿ ಸ್ಕೀಮನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗ ಬೆಂಗಳೂರು ನಗರದಲ್ಲಿ ನೀರಿಗೆ ಬಹಳ ತೊಂದರೆಯಾಗಿದೆ. ನಮಗೆ ದಿನಕ್ಕೆ 16 ಮಿಲಿಯನ್ ಗ್ಯಾಲನ್ ನೀರು ಮಾತ್ರ ಬರುತ್ತಿದೆ. ಇದನ್ನು ಹಂಚಿಕೆ ಮಾಡುವುದನ್ನು ನೋಡಿದರೆ ಮತ್ತಷ್ಟು ನಮಗೆ ಬೇಸರವಾಗುತ್ತದೆ. ಸರ್ಕಾರಿ ಬಿಲ್ಡಿಂಗ್‌ಗಳಲ್ಲಾದರೆ ದಿನವೆಲ್ಲಾ ನೀರು ಬರುತ್ತದೆ. ಸಿಟಿಯಲ್ಲಿ ನೀರಿನ ತೊಂದರೆ ಹೇಳತೀರದು. ಈ ತೊಂದರೆಯನ್ನು ನಿವಾರಿಸಲು ಏನಾದರೊಂದು ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕಾದ್ದು ಅತ್ಯಗತ್ಯ. ಬೋರ್‌ವೆಲ್‌ಗಳನ್ನಾದರೂ ತೆಗೆಯಿಸಿ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದೆ. ಆದರೆ ಕಾರ್ಪೊರೇಷನ್ನಿನಲ್ಲಿ ಹಣವಿಲ್ಲ. ಆದ್ದರಿಂದ ಸರ್ಕಾರದವರು ಕಾರ್ಪೊರೇಷನ್ನಿಗೆ ಧನಸಹಾಯ ಮಾಡಿ ನೀರಿನ ವಿಷಯದಲ್ಲಿ ಈ ನಗರ ವಾಸಿಗಳಿಗೆ "Temporary Relief" ನ್ನಾದರೂ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇನ್ನು ಬೆಂಗಳೂರು ಸಿಟಿಯ Sewage Disposal ವಿಷಯ. ಇದು ಏನೇನೂ ಸರಿಯಾಗಿಲ್ಲ. ಮೈಸೂರಿನಲ್ಲಿ ಇದಕ್ಕೆ ಏರ್ಪಾಡಿದೆ; ಇನ್ನೂ ಅನೇಕ ಸಿಟಿಗಳಲ್ಲಿಯೂ ಈ ವ್ಯವಸ್ಥೆ ಇದೆ. ಆದರೆ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಇದಕ್ಕೆ ವ್ಯವಸ್ಥೆ ಮಾಡದೆ ಕೆಂಪಾಂಬುಧಿ ಕೆರೆ ಮತ್ತು ಚಲ್ಲಘಟ್ಟಕ್ಕೆ ಬಿಡುವುದೆಂದರೆ ನಾಚಿಗೆ ಕೇಡು. ಇದರಿಂದಾಗಿ ಸೊಳ್ಳೆಯ ಕಾಟ ಈ ನಗರದಲ್ಲಿ ಹೇಳತೀರದಷ್ಟಾಗಿದೆ. ಈ ಬಗ್ಗೆ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳ ಬಯಸುತ್ತೇನೆ.

Sri R. DAYANANDA SAGAR (Chamarajpet).—I request you to kindly give me some time to speak about the water supply in Bangalore.

Mr. SPEAKER.—I am sorry...

Sri R. DAYANANDA SAGAR.—For the last four days I have been trying to speak. Do you not want to hear us ?

Mr. SPEAKER.—I do not want this discussion to go on. Yesterday I said that the debate would close before the Tea break. So, if I am not able to give more time, I cannot help it. I now call upon the Chief Minister to reply.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಭಾಷಣದ ಬಗ್ಗೆ ನಾವು ಕಳುಹಿಸಿರುವ ತಿದ್ದುಪಡಿಗಳ ಮೇಲೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಲಿಲ್ಲ. ಸಾಮಾನ್ಯವಾಗಿ ಯಾವ ಸಭೆಯಲ್ಲೂ ಈ ಸಂಪ್ರದಾಯವನ್ನು ನೋಡಿಲ್ಲ. ಇದು ಸರ್ಕಾರದವರು ಯಾವ ತರದ ಒತ್ತಾಯ ತರುವುದರಿಂದಾಯಿತೋ ನನಗೆ ಗೊತ್ತಿಲ್ಲ.

Mr. SPEAKER.—The Hon'ble Member must know that no pressure is brought on me.

ಶ್ರೀ ಎಸ್. ಗೋಪಾಲಗೌಡ.—ಮತ್ತು, ರಾಜ್ಯಪಾಲರ ಭಾಷಣದ ಬಗ್ಗೆ ಸರ್ಕಾರದವರು ಏನು ಅಲಕ್ಷ್ಯ ಮತ್ತು ಉಪೇಕ್ಷೆಯನ್ನ ತೋರಿಸಿದ್ದಾರೆಯೋ ? ಚರ್ಚೆಯನ್ನು ಪ್ರಾರಂಭಮಾಡಿ, ಮಧ್ಯೇ ಯೂನಿವರ್ಸಿಟಿ ಬಿಲ್ಲು ತರುವುದು ಮುಂತಾಗಿ ಎಲ್ಲಾ ಮಾಡಿ ಈಗ ಇದರ ಚರ್ಚೆಯನ್ನು ಮುಗಿಸುತ್ತಿದ್ದಾರೆ. ತಾವೂ ಸಾಕಾದಷ್ಟು ಚರ್ಚೆಗೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ ಕೊನೆಯ ಪಕ್ಷ ವಿರೋಧಪಕ್ಷದಲ್ಲಿ ಯಾರು-ಏನು ಇದ್ದಾರೆ ಎಂಬುದಕ್ಕೂ ಗಮನ ಕೊಡದೆ, ಪ್ರಾರಂಭದಲ್ಲೆಲ್ಲಾ ಶ್ರೀ ಗಾಂಜಿ ವೀರಪ್ಪ ಮುಂತಾದವರಿಗೆ ಗಂಟೆಗಟ್ಟಲೆ ಅವಕಾಶಕೊಟ್ಟು ನಿನ್ನೆ 15 ನಿಮಿಷ ಮಾಡಿ ಈಚೆಗೆ ಎರಡೆರಡು ನಿಮಿಷ ಮಾಡಿ ಈಗ ತಾವು ಮುಗಿಸುವುದಕ್ಕೆ ಪ್ರಯತ್ನಿಸುತ್ತಿದ್ದೀರಿ! ಹೀಗೆ ಅವಸರ ಪಡುವುದನ್ನು ನಾನು ಇಷ್ಟಪಡುವುದಿಲ್ಲ ಮತ್ತು ಬಹಳ ಅನುಚಿತವಾದ ವರ್ತನೆಯೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ ಮತ್ತು ಇದಕ್ಕೆ ನನ್ನ ಪ್ರತಿಕ್ರಿಯೆಯೇನೆಂದರೆ, ಯಾವ ಭಾಷಣದ ಮೇಲೆ ಇದೆಲ್ಲಾ ಬಂತೋ ಅದಕ್ಕೆ...

* * * *

Mr. SPEAKER.—The hon'ble member must know that he should not do it. It is an insult to the Governor. That portion of his statement will be expunged.

****Expunged as directed by the Chair.

I am very sorry that members should feel like that. So far as the amendments are concerned, all the amendments were moved. If we look to the proceedings on previous occasions, the convention has been that all amendments are put before the House and every member is entitled to participate. There is no special reservation in favour of those who have moved the amendments. If the members so desire that the convention should not be adhered to, they could have mentioned it earlier. Yesterday I told how the time would be apportioned and I have adhered to it. As far as possible I have relaxed the time limit. Unless the House is prepared to sit longer—personally I am willing—for two hours, I have no objection to allow others to speak. If they do not agree I must ask the Government to reply. May I know how many members want to speak ?

(*Eight persons stood up*)

Sri GANJI VEERAPPA (Harihar).—It is a matter of privilege of this House, respect of this House. Hon'ble Member persisted..........

Mr. SPEAKER.—The Hon'ble Member may give it in writing.

Sri GANJI VEERAPPA.—We should observe decorum and decency. Let our friends feel that they are part of this House. What I am submitting...

Mr. SPEAKER.—I have understood the point. You may kindly give it in writing. Why do you develop the point ?

Sri S. SIVAPPA.—This should be very seriously considered. The Members on the Opposition benches agreed to co operate with you to speak on this very important question, *i.e.*, the Motion of Thanks on the Governor's Address. But if the ruling party is not agreeable to this simple suggestion, I am afraid we do not know how to co-operate. So many members were on their legs to speak and you were prepared to sit for two more hours. That was a good gesture. If the ruling party does not respond to the gesture, I request the Speaker to take his own decision. If the sense of the House is that the Opposition members want to co-operate, I request the Speaker to be firm in the matter. The ruling party is in a brute majority.

11-30 A.M.

Mr. SPEAKER.—If all the members who stood up want to participate, even the whole day will not be sufficient

Kindly tell me how many are anxious to participate in the debate taking that five minutes will be allowed.

(*Many members stood up*)

Mr. SPEAKER.—If it is just like that, how is it possible ?

Sri S. SHIVAPPA.—Ten into ten will be 100 minutes.

Mr. SPEAKER.—The Hon'ble Chief Minister.

Sri S. SHIVAPPA.—Is it because the Government is not willing ? I am again requesting them to co-operate. The Opposition is very eager to speak. I request the Government.........

Sri S. R KANTHI.—Do not request the Government. It is the ruling of the Chair that I should not reply. The Government or the Congress party people have not said anything.

Sri S. SHIVAPPA.—You have taken away one day for the University Amendment Bill.

Sri S. R. KANTHI.—Who has taken? The house has taken.

Sri S. SHIVAPPA.—It is quite reasonable that we ask for some time taken away......

Sri S. R. KANTHI.—Who has taken away ? I should like to know...

Mr. SPEAKER.—Kindly begin.

Sri S. R. KANTHI.—One of the hon'ble members made the following remark......

Sri S. SHIVAPPA.—If the Government does not yield, we are not prepared to hear them, unless they give us two hours... ..

Mr. SPEAKER.—I have given my ruling. The responsibility is mine.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಚರ್ಚೆಯನ್ನು ಬೇಕಾದರೆ ಮುಂದುವರಿಸಿ ಈ ಸಭೆಯನ್ನು ಮುಂದಕ್ಕೆ ಹಾಕಿ. ಪುನಃ ನಾವು ಸೇರಿದಾಗ ಬೇಕಾದರೆ ಸರ್ಕಾರದವರು ಉತ್ತರ ಹೇಳಲಿ. ಇದರ ಫೀಸಿಬಿಲಿಟೀಸ್ ಮತ್ತು ಪಾಸಿಬಿಲಿಟೀಸ್ ಏನೇನು ಎಂಬುದನ್ನು ತಾವು ಮತ್ತು ಸರ್ಕಾರದವರು ಯೋಚನೆ ಮಾಡಬೇಕು.

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರ ಉತ್ತರ ಹೇಳುವುದು ಅವಶ್ಯಕವಿಲ್ಲವೆಂದು ಹೇಳುವುದು

(ಶ್ರೀ ಎಸ್. ಆರ್. ಕಂಠಿ)

ಸರಿಕಾಣುವುದಿಲ್ಲ. ಸದಸ್ಯರು ಹೇಳಿದ್ದನ್ನೆಲ್ಲಾ ನಾವು ಎಲ್ಲರೂ ಕೇಳಿದ್ದೇವೆ. ಅಂದಮೇಲೆ ಸರ್ಕಾರದವರು ಹೇಳುವುದನ್ನು ಕೇಳುವುದಕ್ಕಾಗುವುದಿಲ್ಲವೆಂದು ವಿರೋಧಪಕ್ಷದವರು ಹೇಳಿದರೆ, ಬಿಡಿ, ನನ್ನ ಅಭ್ಯಂತರ ವಿಲ್ಲ.

Sri S. SHIVAPPA.—We are ready to reassemble at 3 o' clock. Let the Government ...

Sri S. R. KANTHI.—No, Sir. It is not possible.

Mr. SPEAKER.—Now the Hon'ble Chief Minister will begin.

Sri S. R. KANTHI.—Sir, the way the opposition is putting this view point is rather strange. In these matters, what is often done is that the Leader of the Opposition and the Leader of the House sit together outside and come to the House and then a request is made. In this connection, I am surprised, the Leader of the Opposition wants three more hours. It is very strange. He could have told me...

